ಸಂಪುಟ/Volume : 41
ಸಂಚಿಕೆ/Issue : 8
ಪುಟ/Pages : 12
ಬೆಲೆ/Price : ₹ 10/–

ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಮೇ 2019 ಮಾಸ ಪತ್ರಿಕೆ

Akhila Karnataka Shikshaka Samachar | May 2019 | Monthly

## ನಮ್ಮೆಲ್ಲರ ಉತ್ಸಾಹದ ನಡಿಗೆ ಶಾಲೆಯ ಕಡೆಗೆ



A Journal of Karnataka State Secondary Teachers' Association

# ವರುಷ, ವರುಷ ಕಳೆದರೂ

ವರುಷ ವರುಷ ಕಳೆದರೂ
ಹೊಸ ವರುಷ ಮರಳಿ ಬರುತಿದೆ
ಹೊಸ ವರುಷಕೆ ಹೊಸ ಮಕ್ಕಳು
ನಲಿದು ನಲಿದು ಬರುತಿರೆ ॥ವ॥

ಶಾಲೆಯ ಫಲಿತಾಂಶ ನೋಡಿ
ಶಿಕ್ಷಕರ ಉತ್ಸಾಹ ಕೇಳಿ
ಶಾಲೆ ಕಡೆಗೆ ಬರುತಿರೆ
ಹಳೆ ವಿದ್ಯಾರ್ಥಿಗಳ ನೋಡಿ
ಹೊಸ ವಿದ್ಯಾರ್ಥಿಗಳು ಕೂಡಿ
ಹೊಸ ಕಳೆಯ ತರುತಿರೆ ॥ವ॥

ವರುಷಕೊಂದು ಹೊಸತು ಬ್ಯಾಚು
ಹರುಷಕೊಂದು ಹೊಸತು ಕಲಿಕೆ
ಎಲ್ಲಾ ವಿದ್ಯಾರ್ಥಿಗಳಿಗೆ
ಒಂದೇ ಒಂದು ಬೋಧನಾ ವಿಧಿ
ಒಂದೇ ನೋಟ ಒಂದೇ ಜ್ಞಾನ
ನಮಗದಷ್ಟೇ ಏತಕೋ ॥ವ॥

ವರುಷಕೊಮ್ಮೆ ಹೊಸ ಬೋಧನೆ
ಹೊಸ ದಿನ ಹೊಸ ಜ್ಞಾನ
ನಮಗೆ ಏಕೆ ಬಾರದು?
ನಮ್ಮ ಮಕ್ಕಳೆಂಬ ಭಾವ
ನನ್ನ ಶಾಲೆಯೆಂಬ ನೋಟ
ನಮಗೆ ಬಾರಲಾರದೇ ॥ವ॥

'ಕುಲವಧು' ಚಲನಚಿತ್ರದ ಯುಗಯುಗಾದಿ ಗೀತೆಯನ್ನು ಕೇಳಿದಾಗ ಯಾರ ಮನಸ್ಸಿನಲ್ಲಿ ಉತ್ಸಾಹ ಬಾರದು ? ಹೇಗೆ ಯುಗಾದಿ ಬಂದಾಗ ಪ್ರಕೃತಿಯಲ್ಲಿ ಹೊಸ ಚೈತನ್ಯ, ಹೊಸ ಚಿಗುರು, ಹಸಿರು ಮೂಡಿ ಎಲ್ಲರ ಮನ-ಮನೆಯಲ್ಲಿ ಉತ್ಸಾಹದ ಚಿಲುಮೆ ಹುಟ್ಟುವುದೋ ಹಾಗಯೇ ಶಿಕ್ಷಕರ ಜೀವನದಲ್ಲಿ ಜೂನ್ ಬಂದಾಗ ಹೊಸ ವರುಷ ಬಂದಂತೆ. ಯುಗಾದಿ ಅಂದರೆ ಯುಗದ ಆದಿ ಎಂದು. ಅಂದರೆ ಹೊಸ ಯುಗದ ಪ್ರಾರಂಭ ಎಂದು. ಶಿಕ್ಷಕರ ಜೀವನದಲ್ಲಿ ಜೂನ್ ಎಂಬುದು ಹೊಸ ವರುಷದ ಪ್ರಾರಂಭವಾಗುತ್ತದೆ.

ಮೂರು ವರುಷ ಕಲಿತ ಮಕ್ಕಳು ಪರೀಕ್ಷೆಯನ್ನು ಬರೆದು, ಫಲಿತಾಂಶ ನೀಡಿ, ಸಂತೋಷ ನೀಡಿದ ನಂತರ ಶಿಕ್ಷಕರು ಸ್ವಲ್ಪ ದಿನಗಳ ಕಾಲ ಸಂತೋಷ (ಇಲಾಖೆಯವರು ಯಾವುದೇ ತರಬೇತಿಗೆ ನಿಯೋಜಿಸದಿದ್ದರೆ)ವಾಗಿ ಕಾಲ ಕಳೆದು, ತಮ್ಮ ಜ್ಞಾನ ವಿಕಾಸಕ್ಕೆ ಅನುಕೂಲವಾಗುವ ಅನೇಕ ಪುಸ್ತಕಗಳನ್ನು ಓದಿ ಹೊಸ ಚೈತನ್ಯ, ಉತ್ಸಾಹದೊಂದಿಗೆ ಇನ್ನೊಂದು ವರ್ಷಕ್ಕೆ ಕಾಲಿಡುವಾಗ ಕಳೆದ ವರ್ಷದ ಫಲಿತಾಂಶದ ವಿಶ್ಲೇಷಣೆ ಮಾಡಿಕೊಂಡು, ಯಾವ-ಯಾವ ವಿಧಾನದಿಂದ ಬೋಧನೆ ಮಾಡಿದರೆ ಫಲಿತಾಂಶ ಹೇಗೆ ಬರುತ್ತದೆ. ಫಲಿತಾಂಶವನ್ನು ಇನ್ನೂ ಸುಧಾರಿಸಿಕೊಳ್ಳುವ ಬಗೆ ಹೇಗೆ ? ಇನ್ನೂ ವಿದ್ಯಾರ್ಥಿಗಳ ಕಲಿಕಾ ಆಸಕ್ತಿಯನ್ನು ಹೆಚ್ಚಿಸಿ ಬೋಧನೆ ಮಾಡುವ ವಿಧಾನವೇನಾದರೂ ಕಂಡುಕೊಳ್ಳಬಹುದೇ? ವಿದ್ಯಾರ್ಥಿಗಳಲ್ಲಿ ರಾಷ್ಟ್ರಪ್ರೇಮ, ನೈತಿಕತೆ, ಕರ್ತವ್ಯಪ್ರಜ್ಞೆ, ಪರಿಸರ ಕಾಳಜಿ ಮೂಡಿಸಲು ಹೊಸದೇನಾದರೂ ಕಾರ್ಯಕ್ರಮಗಳನ್ನು ಆಯೋಜಿಸಬಹುದೇ ? ಹೊಸ ವಿದ್ಯಾರ್ಥಿಗಳಲ್ಲಿ ಕಲಿಕಾಸಕ್ತಿ ಮೂಡಿಸುವುದು ಹೇಗೆ ? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡು ಹೊಸ ಚೈತನ್ಯದೊಂದಿಗೆ, ಉತ್ಸಾಹದೊಂದಿಗೆ ವರ್ಷದ ಆರಂಭವನ್ನು ಮಾಡಬೇಕು. ಭಾರತೀಯ ಸಂಸ್ಕೃತಿಯ ಬಗ್ಗೆ ಕಾಳಜಿಯನ್ನು ಮೂಡಿಸುವ ಕೆಲಸವನ್ನು ಸಹ ಶಿಕ್ಷಕರು ಮಾಡಬೇಕು. ಇತ್ತೀಚೆಗೆ ಮಕ್ಕಳಲ್ಲಿ ಸಂಸ್ಕಾರದ ಅಭಾವ ಕಂಡು ಬರುತ್ತಿರುವುದನ್ನು ನಾವು ಗಮನಿಸಬಹುದು. ಒಳ್ಳೆಯ ಸಂಸ್ಕಾರವನ್ನು ಸಹ ವಿದ್ಯಾರ್ಥಿಗಳಲ್ಲಿ ಮೂಡಿಸುವುದು ಶಿಕ್ಷಕರ ಕೆಲಸವೇ.

ಒಟ್ಟಾರೆಯಾಗಿ ಅಯ್ಯೋ ರಜೆ ಮುಗಿಯಿತು, ಇನ್ನು ಅದೇ ಕೆಲಸದ ಒತ್ತಡ ಎಂದು ಬೇಸರಿಸಿಕೊಂಡು ಶಾಲೆಗೆ ಹೋಗದೆ ಹೊಸ ಗುರಿ, ಹೊಸ ಚೈತನ್ಯದೊಂದಿಗೆ ಶಾಲೆಯ ಪ್ರಾರಂಭೋತ್ಸವವನ್ನು ಆಚರಿಸೋಣವೇ ?

ಸಂಪಾದಕ

# ವ್ಯಾಸವಾಣಿ



ಊರ್ಧ್ವ ಬಾಹು ವಿರೌಮ್ಯೇಶಾಂ ।
ನಚ ಕಶ್ಚಿತ್ ಶೃಣೋತಿಮೇ ॥
ಧರ್ಮಾದರ್ಥಃಚ ಕಾಮಶ್ಚ ನ
ಕಿಮರ್ಥಂ ನ ಸೇವ್ಯತೆ ॥

## ಪರಿವಿಡಿ


- ಮುತ್ತಿನ ಹಾರ 3
- ಶಿಕ್ಷಣದ ಉದ್ದೇಶ ಸಾಧನೆ ಬಾಂಧವ್ಯದಿಂದ 4
- 1857 ಮೇ 10 ರ ಕಿಡಿ ಸ್ವಾತಂತ್ರ್ಯದ ಮುನ್ನುಡಿ... 6
- ಪ್ರಾತಃಸ್ಮರಣೀಯರು ಇವರೆಲ್ಲ... 7
- ಮೂರು ಮನೆಗಳು ಕಲಿಸಿದ ಮನಮುಟ್ಟುವ ಮೂರು ಗುಣಗಳು 8
- ಮತದಾನ ಜಾಗೃತಿಯಲ್ಲಿ ಶಿಕ್ಷಕನ ಪಾತ್ರ 9
- ಶಿಕ್ಷಣದಲ್ಲಿ ಹೊಸ ಪ್ರಯೋಗಗಳು 11

# ಮುತ್ತಿನ ಹಾರ

'ಶ್ವೇತಾದ್ರಿ'



ಜಗತ್ತಿನಲ್ಲಿ ಬೇರೆ ಎಲ್ಲಾ ಜೀವಿಗಳಿಗಿಂತ ಮಾನವ ಭಿನ್ನ. ಆಲೋಚನ ಶಕ್ತಿ ಹಾಗೂ ಮಾತು ಇವುಗಳಿಂದಾಗಿ ಮಾನವ ಶ್ರೇಷ್ಠ. ಸಮಾಜದಲ್ಲಿ ಮಾತು ಬಹಳ ಪ್ರಮುಖವಾದ ಪಾತ್ರ ವಹಿಸುತ್ತದೆ. ಆ ಮಾತು ಹೇಗಿರಬೇಕು? 12ನೆಯ ಶತಮಾನದ ಪ್ರಮುಖ ವಚನಕಾರರಾದ ಬಸವಣ್ಣನವರು ಹೀಗೆ ಹೇಳುತ್ತಾರೆ.

**"ನುಡಿದರೆ ಮುತ್ತಿನ ಹಾರದಂತಿರಬೇಕು**
**ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು**
**ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು**
**ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು**
**ನುಡಿಯೊಳಗಾಡಿ ನಡೆಯದಿದ್ದಡೆ**
**ಕೂಡಲಸಂಗಮದೇವನೆಂತೊಲಿವನಯ್ಯಾ"**

ಮುತ್ತು ನವರತ್ನಗಳಲ್ಲಿ ಒಂದು. ಅಮೂಲ್ಯವಾದುದು. ಬಿಳಿಯ ಬಣ್ಣದ ಮುತ್ತು ಶುಭ್ರತೆ, ಸ್ವಚ್ಛತೆಯ ಸಂಕೇತವೂ ಹೌದು. ಅಂತಹ ಮುತ್ತಿನ ಹಾರ ಎಷ್ಟು ಆಕರ್ಷಕವಾಗಿರುತ್ತದೆಯೊ ಮತ್ತು ಮನಸ್ಸಿಗೆ ಮುದವನ್ನು ನೀಡುತ್ತದೆಯೊ ಹಾಗೆ ನಾವು ಆಡುವ ಮಾತು ಬೇರೆಯವರ ಮನಸ್ಸಿಗೆ ಮುದ ನೀಡುವಂತಿರಬೇಕು. ಇನ್ನೊಂದು ಅಮೂಲ್ಯವಾದ ನವರತ್ನ ಮಾಣಿಕ್ಯ. ಇದು ಹೊಳಪನ್ನು, ಕಾಂತಿಯನ್ನು, ಬೆಳಕನ್ನು ಬೀರುತ್ತದೆ. ಅದೇ ರೀತಿ ನಮ್ಮ ಮಾತು ಕೂಡ ಕೇಳುಗರಿಗೆ ಪ್ರಭೆಯನ್ನು ಬೀರುವಂತಿರಬೇಕು. ಸ್ಫಟಿಕವೂ ಕೂಡ ಅಮೂಲ್ಯವಾದ ಮಣಿ. ಸ್ಫಟಿಕದ ಶಲಾಕೆ ಹೇಗೆ ಗಾಢವಾದ ಪ್ರಭಾವವನ್ನು ಬೀರುತ್ತದೆಯೋ ಹಾಗೆ ನಾವು ಆಡುವ ಮಾತು ಕೇಳುಗರ ಮನಸ್ಸಿನಲ್ಲಿ ಅಚ್ಚೊತ್ತಿದಂತೆ ಹರ್ಷದಾಯಕವಾಗಿರಬೇಕು. ನಾವು ಏನು ಮಾಡಿದರೂ ಅದು ನಮ್ಮ ಮುಕ್ತಿಗಾಗಿ. ಆದ್ದರಿಂದ ನಮ್ಮ ಆಗುಹೋಗುಗಳೆಲ್ಲ ದೇವರು ಮೆಚ್ಚುವಂತಿರಬೇಕು. ಹಾಗೆಯೆ ನಮ್ಮ ಮಾತು ಕೂಡ ಲಿಂಗ(ದೇವರು) ಮೆಚ್ಚಿ ಹೌದು ಹೌದು ಎಂದು ಒಪ್ಪುವಂತಿರಬೇಕು. ಹಾಗಾದರೆ ಬಣ್ಣಬಣ್ಣದ ಮಾತುಗಳನ್ನಾಡಿದರೆ ಆಯಿತೇ? ಅದಕ್ಕಾಗಿಯೇ ಬಸವಣ್ಣನವರು ಹೇಳುತ್ತಾರೆ 'ನುಡಿಯೊಳಗಾಡಿ ನಡೆಯದಿದ್ದಡೆ ಕೂಡಲಸಂಗಮ ದೇವನೆಂತೊಲಿವನು? ನುಡಿ ನಡೆಗಳು; ಮಾತು, ಕೆಲಸ ಪರಸ್ಪರ ಪೂರಕವಾಗಿರಬೇಕು. ನುಡಿ ನಡೆಗಳಲ್ಲಿ ವ್ಯತ್ಯಾಸವಿದ್ದರೆ ನಾವೇ (ಜನರೇ) ಒಪ್ಪುವುದಿಲ್ಲ. ಕೂಡಲಸಂಗಮದೇವನಂತೂ ಒಲಿಯುವದೇ ಇಲ್ಲ.

ಈ ಎಲ್ಲಾ ಗುಣಗಳನ್ನು ಹೊಂದಿರುವ ನಮ್ಮ ಮಾತು ಹೇಗಿರಬೇಕು? ಮಧುರ ಕವಿ ಚೆನ್ನವೀರ ಕಣವಿಯವರು ಹೀಗೆ ಹೇಳುತ್ತಾರೆ.

**'ನಾವು ಆಡುವ ಮಾತು ಹೀಗಿರಲಿ ಗೆಳೆಯ**
**ಮೃದುವಚನ ಮೂಲೋಕ ಗೆಲ್ಲುವುದು ತಿಳಿಯ'.**

ನಮ್ಮ ಮಾತು ಮೃದುವಾಗಿರಬೇಕು, ಅಂದರೆ ಬೇರೆಯವರ ಮನಸ್ಸಿಗೆ ನೋವುಂಟು ಮಾಡದ ಹಾಗೆ ಇರಬೇಕು. 'ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ; 'ಅಯ್ಯಾ' ಎಂದರೆ ನಮ್ಮ ಗೌರವ ಹೆಚ್ಚಾಗುತ್ತದೆ . 'ಎಲವೋ' ಎಂದರೆ ನಮ್ಮ ಅಹಂ ಅನ್ನು ಪ್ರದರ್ಶಿಸಿದಂತೆ. 'ಅಯ್ಯಾ' ಎಂದರೆ ನಮಗಾಗುವ ನಷ್ಟವೇನಿಲ್ಲ. ಮನೆಗೆ ಬಂದವರನ್ನು 'ಏನು ಬಂದಿರಿ, ಹದುಳವಿದ್ದಿರೆ?' ಎಂದು ಮಾತನಾಡಿಸಿದರೆ ನಮ್ಮ ಐಸಿರಿಯೇನೂ ಹಾರಿ ಹೋಗುವುದಿಲ್ಲ.

'ಮಾತೇ ಮಾಣಿಕ್ಯ; 'ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು'; 'ಮಾತೇ ಮುತ್ತು, ಮಾತೇ ಮೃತ್ಯು' ಮುಂತಾದ ನಾಣ್ಣುಡಿಗಳೂ ಮಾತಿನ ಮಹತ್ವವನ್ನು ತಿಳಿಸುತ್ತವೆ. ಮಾತನ್ನು ಒಂದು ಸಲ ಆಡಿದರೆ ಮುಗಿಯಿತು. ಅದಕ್ಕಾಗಿಯೇ ಹೇಳುವುದು, ಮಾತನಾಡುವ ಮೊದಲು ಹತ್ತು ಸಲ ಯೋಚಿಸು ಎಂದು. ಮಾತನ್ನು ಆಡಿದ ಮೇಲೆ ಹಿಂದಕ್ಕೆ ಪಡೆಯಲಾಗುವುದಿಲ್ಲ. ಕಠಿಣ ನುಡಿಗಳ ಪರಿಣಾಮ ಮನಸ್ಸಿನಿಂದ ಎಂದಿಗೂ ಮರೆಯಾಗುವುದಿಲ್ಲ. ಬೆಂಕಿಯಂತೆ ಸುಡುತ್ತಲೇ ಇರುತ್ತದೆ. ಎಷ್ಟು ಕ್ಷಮೆ ಕೇಳಿದರೂ ಒಡೆದ ಮನಸ್ಸು ಒಂದಾಗಲಾರದು. ಬದಲಾಗಿ ವಿವೇಕಯುತವಾದ ಮಾತು 'ಮೃದು ವಚನವೇ' ಆಗಿರುತ್ತದೆ. ಎಲ್ಲರಿಗೂ ಸಂತೋಷವನ್ನೇ ಉಂಟುಮಾಡುತ್ತದೆ.

ಸಮಾಜದಲ್ಲಿ ನುಡಿದಂತೆ ನಡೆದವರಿಗೇ ಗೌರವ. ನಡೆ, ನುಡಿಗಳು ಬೇರೆಬೇರೆಯಾದರೆ ಬೆಲೆಯೇ ಇರುವುದಿಲ್ಲ. ನಾವು ಶಿಕ್ಷಕರು. ನಮ್ಮ ಮಾತು ಎಳೆಯ ಮನಸ್ಸುಗಳ ಮೇಲೆ ಗಾಢವಾದ ಪರಿಣಾಮ ಬೀರುತ್ತದೆ. ಹಾಗಾಗಿ ವಿದ್ಯಾರ್ಥಿಗಳೊಂದಿಗೆ ನಾವು ವಿಶೇಷವಾದ ಎಚ್ಚರಿಕೆಯಿಂದ ಮಾತನಾಡಬೇಕಾಗುತ್ತದೆ. ವಿದ್ಯಾರ್ಥಿಗಳು ಶಿಕ್ಷಕರ ನಡೆ–ನುಡಿಗಳನ್ನು ಗಮನಿಸುತ್ತಲೇ ಇರುತ್ತಾರೆ, ಅನುಸರಿಸುತ್ತಾರೆ ಕೂಡ. ಆದ್ದರಿಂದ ನಮ್ಮ ನಡೆ–ನುಡಿಗಳು ಒಂದಾಗಬೇಕಾದುದು ಅನಿವಾರ್ಯ. ಬಸವಣ್ಣನವರಂತೆ ನಾವೂ ಈ ಆತ್ಮ ವಿಶ್ವಾಸವನ್ನು ಹೊಂದಬಹುದಲ್ಲವೇ?

**"ಭಕ್ತಿ ಸುಭಾಷಿಯ ನುಡಿಯ ನುಡಿವೆ ನುಡಿದಂತೆ ನಡೆವೆ**
**ನಡೆಯೊಳಗೆ ನುಡಿಯ ಪೂರೈಸುವೆ**
**ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ**
**ಒಂದು ಜವೆ ಕೊರತೆಯಾದಡೆ**
**ಎನ್ನನದ್ದಿ ನೀನೆದ್ದು ಹೋಗು ಕೂಡಲಸಂಗಮದೇವ."**

# ಶಿಕ್ಷಣದ ಉದ್ದೇಶ-ಸಾಧನೆ ಬಾಂಧವ್ಯದಿಂದ



**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**



ಭಾರತ ವಾಸಿಗಳೆಲ್ಲರಿಗೂ ಹೊಸವರ್ಷವೆಂದರೆ ಯುಗಾದಿ ಇಂದ ಯುಗಾದಿ. ಈ ವರ್ಷ ವಿಕಾರಿ ನಾಮ ಸಂವತ್ಸರದಿಂದ ಮುಂದಿನ ವರ್ಷ ಶಾರ್ವರಿ ನಾಮ ಸಂವತ್ಸರದವರೆಗೆ. ಆದರೆ ಶಿಕ್ಷಕರಾದ ನಮಗೆ ಜೂನ್ ಮಾಹೆಯಿಂದ ಮುಂದಿನ ಮೇ ಮಾಹೆಯವರೆಗೆ. ಈ ಹನ್ನೆರೆಡು ತಿಂಗಳಲ್ಲಿ ಅಧ್ಯಯನ-ಅಧ್ಯಾಪನ, ಪರೀಕ್ಷೆ, ಉತ್ತರ ಪತ್ರಿಕೆಗಳ ಮೌಲ್ಯಮಾಪನ ಹೀಗೆ ಶಾಲೆಗೆ ಸಂಬಂಧಿಸಿದಂತೆ ಅನೇಕ ಕೆಲಸಗಳು.

ನಮಗೆ ತಿಳಿದಿರುವಂತೆ ನಮ್ಮ ಶೈಕ್ಷಣಿಕ ಪರಿವಾರದ ಮೂರು ಕಾಲುಗಳೆಂದರೆ ವಿದ್ಯಾರ್ಥಿಗಳು, ಪೋಷಕರು ಹಾಗೂ ಬಹು ಮುಖ್ಯವಾಗಿ ನಾವು ಶಿಕ್ಷಕರು. ಈ ಮೂರೂ ಸ್ತಂಭಗಳ ಸಮನ್ವಯದಿಂದ ಮಾತ್ರ ಶಿಕ್ಷಣದ ಗಾಲಿ ಸರಾಗವಾಗಿ ಉರುಳುವುದು. ಈ ಗಾಲಿ ಮಜಬೂತಾಗಿದ್ದರೆ ಮಾತ್ರ ಸಮಾಜವೆಂಬ ಗಾಡಿ ಸಲೀಸಾಗಿ ಮುನ್ನಡೆಯುವುದು.

ಬಹಳ ಹಿಂದೆ ಪ್ರತಿ ಗ್ರಾಮದಲ್ಲಿ ಕೂಲಿಮಠವೆಂಬ ಶಾಲೆಯಿತ್ತು. ಅಲ್ಲೊಬ್ಬ ಬಡ ಮೇಷ್ಟ್ರು. ಗ್ರಾಮಸ್ಥರಿಗೆಲ್ಲ ಚಿರಪರಿಚಿತರು. ಮಠದ ಮೇಷ್ಟ್ರಿಗೆ ಎಲ್ಲರ ಹೆಸರೂ ತಿಳಿದಿತ್ತು. ವಿದ್ಯಾರ್ಥಿಗಳೂ ಕಡಿಮೆ. ಪ್ರತಿಯೊಬ್ಬನ ವಂಶಾವಳಿಯ ಜಾತಕದ ಅರಿವಿತ್ತು. ಅವರು ವಿದ್ಯಾರ್ಥಿಗಳಿಗಷ್ಟೇ ಗುರುಗಳಲ್ಲ, ಗ್ರಾಮಸ್ಥರಿಗೆಲ್ಲಾ ಓಜಯ್ಯನವರು. ಪರಸ್ಪರರಲ್ಲಿ ಬಾಂಧವ್ಯವಿತ್ತು. ಸಹಕಾರ, ಸಹಯೋಗವಿತ್ತು, ಶಿಕ್ಷಣದ ವ್ಯವಸ್ಥೆ ಉನ್ನತವಾಗಿತ್ತು.

ಈ ಮಾತು ಯಾರಾದರೂ ಹೇಳಿದರೆ ಅಂದು ಕಾಲ ಚೆನ್ನಾಗಿತ್ತು. ಈಗ ಕಾಲ ಬದಲಾಗಿದೆ ಎಂಬ ಹಾರಿಕೆಯ ಉತ್ತರ ಸಿಗುತ್ತದೆ. ಕಾಲವೆಲ್ಲಿ ಬದಲಾಗುತ್ತೆ? ಅದೇ ಸೂರ್ಯ, ಅದೇ ಚಂದ್ರ, ಅದೇ ಭೂಮಿಯ ಸುತ್ತಾಟ. "ದಿನಮಪಿರಜನಿ ಸಾಯಂಪ್ರಾತಃಶಿಶಿರವಸಂತೌ ಪುನರಾಯಾತಃ".

ಹಾಗಾದರೆ ಬದಲಾಗಿರುವುದು ಏನು? ಬದಲಾಗಿರುವುದು ಶಿಕ್ಷಕ-ವಿದ್ಯಾರ್ಥಿ-ಪೋಷಕ, ಇವರಲ್ಲಿನ ಮಧುರ ಬಾಂಧವ್ಯ. ಇತ್ತೀಚಿನ ಶಾಲಾ ಮಕ್ಕಳಲ್ಲಿ ಕಂಡು ಬರುವ ಅಶಿಸ್ತು, ಅಶ್ರದ್ಧೆ, ಅಸಹಕಾರ, ಉದಾಸೀನತೆ ಇತ್ಯಾದಿ ಅನಪೇಕ್ಷಿತ ಗುಣಗಳಿಗೆ ಪ್ರಮುಖ ಕಾರಣವೆಂದರೆ ಈ ಬಾಂಧವ್ಯ ರಹಿತ ವ್ಯವಸ್ಥೆ. ಶಿಕ್ಷಣದ ಮೂಲ ಉದ್ದೇಶವಾದ ಜ್ಞಾನಾರ್ಜನೆ, ಹೃದಯಸಂಸ್ಕಾರ ಈಡೇರಬೇಕಾದರೆ ಈ ಮೂವರ ಸಂಬಂಧ ಗಾಢವಾಗಿರಬೇಕು, ಜತೆಗೆ ಶಾಲಾ ಜೀವನ ನಿರಾತಂಕವಾಗಿರಬೇಕು.

ನಿಜ ಅಂದು ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇತ್ತು. ಇಂದು 40-45 ಜನ ಇರುತ್ತಾರೆ. ಹೀಗಾದಾಗ ವೈಯುಕ್ತಿಕ ಸಂಪರ್ಕ ಹೇಗೆ ಸಾಧ್ಯ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೇನು ಉತ್ತರ? 'ಮನಸ್ಸಿದ್ದಲ್ಲಿ ಮಾದೇವ' ಎಂಬುದು ಗಾದೆ ಮಾತು.

ವರ್ಷದ ಪ್ರಾರಂಭದಲ್ಲಿ ನಾವೊಂದು ಪತ್ರಿಕೆ ತಯಾರಿಸಬೇಕು. ಅದರಲ್ಲಿ ಈ ಕೆಳಗಿನ ಅಂಶಗಳು ಇರಬೇಕು. ಅದರ ಪ್ರತಿಯನ್ನು ಎಲ್ಲಾ ವಿದ್ಯಾರ್ಥಿಗಳಿಗೆ ಕೊಟ್ಟು ಭರ್ತಿ ಮಾಡಿಸಿ ನಮ್ಮಲ್ಲಿ ಇಟ್ಟುಕೊಳ್ಳಬೇಕು.

### ಇರಬೇಕಾದ ಅಂಶಗಳು

**1. ವಿದ್ಯಾರ್ಥಿಯ ಹೆಸರು 2. ತರಗತಿ 3. ಹುಟ್ಟಿದ ದಿನಾಂಕ 4. ತಂದೆಯ ಹೆಸರು-ವಿದ್ಯಾರ್ಹತೆ, ವೃತ್ತಿ, ಆದಾಯ 5. ತಾಯಿಯ ಹೆಸರು, ವಿದ್ಯಾರ್ಹತೆ, ವೃತ್ತಿ, ಆದಾಯ 6. ಮನೆವಿಳಾಸ 7. ದೂರವಾಣಿ-ಚರವಾಣಿ 8. ಹಿಂದಿನ ವರ್ಷದ ಅಂಕಪಟ್ಟಿ(ಇದನ್ನು ಪತ್ರಕಕ್ಕೆ ಸೇರಿಸಿರಲಿ) 9. ಅಭಿರುಚಿಯ ವಿಷಯಗಳು. ಉದಾ- ಓದುವುದು, ಆಟ, ನಟನೆ, ಚಿತ್ರಕಲೆ ಇತ್ಯಾದಿ.**

ಇದರ ಆಧಾರದ ಮೇಲೆ ಮುಂದಿನ ಮೂರು ವರ್ಷ ಅವನು/ಅವಳನ್ನು ತಿದ್ದಿ ತೀಡಬಹುದು.

ಮುಂದಿನದು ತರಗತಿಯ ಹಾಜರಿ ಕರೆಯುವಾಗ, ಖೈದಿಗಳಂತೆ ನಂಬರ್ ಕರೆಯದೆ ಹೆಸರು ಹಿಡಿದೇ ಕರೆಯುವುದು. ಇದರಿಂದ ನಮ್ಮ-ಅವರ ಬಾಂಧವ್ಯ ಬೆಸುಗೆಯಾಗುವುದು ಪ್ರತಿಬಾರಿ ನಮ್ಮ ಪ್ರಶ್ನೆಗೆ ಉತ್ತರಿಸುವಾಗ ಅಥವಾ ಅವರು ಪ್ರಶ್ನೆ ಕೇಳುವಾಗ ಅವರು ಹೆಸರನ್ನು ಹೇಳಿಯೇ ಕೇಳಬೇಕು. ಆಗ ಅವರ ಹೆಸರು ನಮ್ಮ ನೆನಪಿನಲ್ಲಿ ಉಳಿಯುವುದು. ವಿದ್ಯಾರ್ಥಿಗಳಿಗೆ ಅವರ ಹೆಸರು ಹಿಡಿದು ಅಧ್ಯಾಪಕರು ಕರೆದಾಗ ಸಂತೋಷವುಂಟಾಗುವುದು. ನಮ್ಮ ಅವರ ಬಾಂಧವ್ಯ ಗಟ್ಟಿಯಾಗುತ್ತದೆ.

ತರಗತಿಯಲ್ಲಿರುವ ಎಲ್ಲ ವಿದ್ಯಾರ್ಥಿಗಳ ಬಗ್ಗೆ ಗಮನ ಹರಿಸುವುದು ನಮಗೆ ಕಷ್ಟವಾದಲ್ಲಿ ತರಗತಿಯಲ್ಲಿರುವ ನಾಲ್ಕಾರು

**ಪುಟ 5 ಕ್ಕೆ** ➢

➢ ಪುಟ 4 ರಿಂದ..... ಶಿಕ್ಷಣ ಬಾಂಧವ್ಯ ...

ಆಯ್ದು ವಿದ್ಯಾರ್ಥಿಗಳನ್ನು ನಮ್ಮ ಸಹಾಯಕ್ಕಾಗಿ ಆರಿಸಿಕೊಳ್ಳಬಹುದು. ಅದನ್ನು ಬೇಕಾದರೆ 'ಮಂತ್ರಿಮಂಡಲ' ಎಂದು ಕರೆಯಿರಿ. ಅವರಿಗೆಲ್ಲಾ ಈ ಕೆಳಗಿನ ಜವಾಬ್ದಾರಿ ನೀಡಿರಿ.

**1. ಮುಖ್ಯಮಂತ್ರಿ :** ಈತ ಉಳಿದ ಮಿತ್ರರೊಂದಿಗೆ ಉತ್ತಮ ಸಂಪರ್ಕ, ಸಂಬಂಧ ಹೊಂದಿರುತ್ತಾನೆ. ತರಗತಿಯ ಶಿಸ್ತನ್ನು ಕಾಪಾಡುತ್ತಾನೆ. ವಾರದಲ್ಲಿ ಕನಿಷ್ಠ ಮೂರ್‍ನಾಲ್ಕು ವಿದ್ಯಾರ್ಥಿಗಳ ಮನೆಗೆ ಹೋಗಿ ಅವರ ಪ್ರಗತಿಯ ಬಗ್ಗೆ ತಿಳಿದುಬಂದು ಅಧ್ಯಾಪಕರಿಗೆ ವರದಿ ಸಲ್ಲಿಸುತ್ತಾನೆ.

**2. ಗೃಹಮಂತ್ರಿ :** ತರಗತಿಯ ಸ್ವಚ್ಛತೆಯನ್ನು ಕಾಪಾಡುತ್ತಾನೆ. ವಿದ್ಯಾರ್ಥಿಗಳು ಶಾಲೆಗೆ ಶುಭ್ರ ಸಮವಸ್ತ್ರ ಧರಿಸಿ ಸರಿಸಮಯಕ್ಕೆ ಬರುವುದನ್ನು ಗಮನಿಸುತ್ತಾನೆ. ಶಾಲಾ ಚಟುವಟಿಕೆಯಲ್ಲಿ ತನ್ನೆಲ್ಲಾ ಮಿತ್ರರು ಸಕ್ರಿಯವಾಗಿ ಭಾಗವಹಿಸುವಂತೆ ಮಾಡುತ್ತಾನೆ. ತಾನು ಸ್ವತಃ ಶಿಸ್ತನ್ನು ಪಾಲಿಸುತ್ತಾನೆ.

**3. ವಿದ್ಯಾಮಂತ್ರಿ:** ಸ್ವತಃ ಓದಿನಲ್ಲಿ ಮುಂದಿರುತ್ತಾನೆ. ಮನೆಗೆಲಸದ ಪುಸ್ತಕಗಳನ್ನು ಸಂಗ್ರಹಿಸುವುದು, ಅಂಕಪಟ್ಟಿಯನ್ನು ತುಂಬುವುದು, ಅಧ್ಯಾಪಕರು ಗುಂಪು ಓದಿಗಾಗಿ ರಚಿಸುವುದು, ವಿದ್ಯಾರ್ಥಿಗಳ ತಂಡದ ಮೇಲ್ವಿಚಾರಣೆ ಮಾಡುವುದು ಇತ್ಯಾದಿ.

ತರಗತಿಯ ಅಧ್ಯಾಪಕರು 15 ದಿನಕ್ಕೊಮ್ಮೆ ಈ ತಂಡದ ಸಭೆ ನಡೆಸಿ ಅವರಿಗೆ ಮಾರ್ಗದರ್ಶನ ಮಾಡುತ್ತಿರಬೇಕು.

ಅಧ್ಯಾಪಕರ ಕೆಲಸ ವಿದ್ಯಾರ್ಥಿಗಳು ಕೇವಲ ಅಂಕ ಗಳಿಸುವುದನ್ನು ಮಾಡುವುದಷ್ಟೇ ಅಲ್ಲ. ಅದಕ್ಕಿಂತ ಮಿಗಿಲಾಗಿ ಅವರನ್ನು ಉತ್ತಮ ಪ್ರಜೆಗಳಾಗಿ, ಸಂಸ್ಕಾರವಂತರನ್ನಾಗಿ ರೂಪಿಸುವುದು. ಇದಕ್ಕಾಗಿ ಶಿಕ್ಷಕರು ಈ ಕೆಳಗಿನ ಅಂಶಗಳನ್ನು ಕಾರ್ಯರೂಪಕ್ಕೆ ತರಬಹುದು.

## ಸಂಸ್ಕಾರ ಶಿಕ್ಷಣ

**1. ದಿನಕ್ಕೊಂದು ಸೂಕ್ತಿ:** ವಿದ್ಯಾರ್ಥಿಗಳು ಪ್ರತಿನಿತ್ಯ ಒಂದು ಸೂಕ್ತಿಯನ್ನು ಬರೆದುಕೊಳ್ಳಲು ಪ್ರೇರಿಪಿಸಬೇಕು. ಓರ್ವ ವಿದ್ಯಾರ್ಥಿಯು ನಿತ್ಯ ಕರಿಹಲಗೆಯ ಮೇಲೆ ಸೂಕ್ತಿಯನ್ನು ಬರೆದು ಮಿಕ್ಕವರು ಬರೆದುಕೊಳ್ಳಲು ಹೇಳುತ್ತಾನೆ. ಸೂಕ್ತಿ ಆರಿಸಿ ತರಲು ಹಲವು ವಿದ್ಯಾರ್ಥಿಗಳಿಗೆ ಹೇಳಬಹುದು.

**2. ವಾರಕ್ಕೊಂದು ಶ್ಲೋಕ:** ನಮ್ಮಲ್ಲಿ ಸುಭಾಷಿತಗಳ ರತ್ನಭಂಡಾರವೇ ಇದೆ. ಈ ವಯಸ್ಸಿನಲ್ಲಿ ಬಾಯಿ ಪಾಠ ಮಾಡಿಸಿದರೆ ಜೀವನಪೂರ್ತಿ ಅದು ನಮಗೆ ಮಾರ್ಗದರ್ಶನ ಮಾಡುತ್ತದೆ. ಶ್ಲೋಕಗಳನ್ನು ಸರ್ವಜ್ಞನ ವಚನಗಳಿಂದ, ಮಂಕುತಿಮ್ಮನ ಕಗ್ಗದಿಂದ, ಬಸವಣ್ಣನವರ ವಚನದಿಂದಲೂ ಆರಿಸಬಹುದು.

**3. ವಾರಕ್ಕೊಂದು ಕಥೆ:** ವ್ಯಕ್ತಿತ್ವ ರೂಪುಗೊಳ್ಳಲು ನಮ್ಮ ಕಣ್ಮುಂದೆ ಆದರ್ಶ ಇರಬೇಕು. ಅಂತಹ ಆದರ್ಶ ವ್ಯಕ್ತಿಗಳ ಜೀವನ, ಸಾಧನೆ ಬಗ್ಗೆ ವಾರಕ್ಕೊಮ್ಮೆ ಕಥಾರೂಪದಲ್ಲಿ ತಿಳಿಸಬೇಕು. ವಿದ್ಯಾರ್ಥಿಗಳಿಗೆ ಅಂತಹ ಸಾಧಕರ ಬಗ್ಗೆ ಹೆಚ್ಚು ತಿಳಿಯಲು ಅವರ ಭಾವಚಿತ್ರ ಸಂಗ್ರಹಿಸಲು ತಿಳಿಸಬೇಕು.

**4. ಪಕ್ಷಕ್ಕೊಂದು ಪುಸ್ತಕ (15 ದಿನ):** ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸವನ್ನು ಬಾಲ್ಯದಿಂದಲೇ ಬೆಳೆಸಬೇಕು. ಅದಕ್ಕಾಗಿ ನಮ್ಮಲ್ಲಿರುವ ಸಂಗ್ರಹದಿಂದ ಅಥವಾ ಶಾಲಾ ಲೈಬ್ರರಿಯಿಂದ ಅವರಿಗೆ ಪುಸ್ತಕ ಕೊಟ್ಟು ಓದಲು ಹೇಳಬೇಕು. ಅನೇಕ ಶಾಲೆಗಳಲ್ಲಿ 'ತರಗತಿ ಲೈಬ್ರರಿ' ಇರುವುದನ್ನು ನಾನು ನೋಡಿದ್ದೇನೆ. ಇದರ ವ್ಯವಸ್ಥೆಯನ್ನು ಓರ್ವ ವಿದ್ಯಾರ್ಥಿಗೆ ನೋಡಿಕೊಳ್ಳಲು ತಿಳಿಸಬಹುದು. ವಿದ್ಯಾರ್ಥಿಗಳು ತಾವು ಓದಿದ ಪುಸ್ತಕದ ಬಗ್ಗೆ ಒಂದು ಟಿಪ್ಪಣಿಯನ್ನು ಬರೆದು ತರಬೇಕೆಂದು ಸೂಚಿಸಿದಲ್ಲಿ ಹಲವರು ಬರೆಯುವ ಕಲೆಯನ್ನು ಕಲಿತಾರು.

**5. ತಿಂಗಳಿಗೊಂದು ಕ್ವಿಜ್:** ವಿದ್ಯಾರ್ಥಿಗಳನ್ನು 3–4 ತಂಡಗಳಾಗಿ ವಿಂಗಡಿಸಿ, ಪೂರ್ವಸೂಚನೆ ನೀಡಿ ಹಲವು ವಿಷಯಗಳ ಬಗ್ಗೆ ಕ್ವಿಜ್ ಮಾಡಬಹುದು. ಉದಾಹರಣೆ ರಾಮಾಯಣ, ಮಹಾಭಾರತ, ಸ್ವಾತಂತ್ರ್ಯ ಯೋಧರು, ಇತಿಹಾಸದ ಪುಟಗಳು. ಹೀಗೆ ಮಾಡುವುದರಿಂದ ಅವರಲ್ಲಿ ಸಾಮಾನ್ಯ ಜ್ಞಾನದ ವೃದ್ಧಿಯಾಗುತ್ತದೆ.

ನಾನಿಲ್ಲಿ ಕೇವಲ 5 ಅಂಶಗಳನ್ನು ಕೊಟ್ಟಿದ್ದೇನೆ. ನಮ್ಮ ಕಲ್ಪನೆಗೆ ತಕ್ಕಂತೆ ಹಲವು ಅಂಶಗಳನ್ನು ಸೇರಿಸಬಹುದು. ನನ್ನ ವೃತ್ತಿ ಜೀವನದ ಕೆಲವು ಪ್ರಯೋಗಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಬಯಸುತ್ತೇನೆ.

ಒಂದು ಶನಿವಾರ ಊಟ ಕಟ್ಟಿಕೊಂಡು ಬರುವಂತೆ ಹಾಗೂ ಮನೆಯವರಿಗೂ ಹೇಳಿ ಬರುವಂತೆ ತಿಳಿಸಿ ವಿದ್ಯಾರ್ಥಿಗಳೊಂದಿಗೆ ಲಾಲ್‌ಬಾಗ್, ಕಬ್ಬನ್‌ಪಾರ್ಕ್‌ಗಳಿಗೆ ಪಿಕ್‌ನಿಕ್ ಹೋದದ್ದು ನನಗೆ ನೆನಪಿದೆ. ಅಷ್ಟೇ ಅಲ್ಲ ಆ ಎಲ್ಲ ವಿದ್ಯಾರ್ಥಿಗಳು ಎಂದಾದರೂ ತಮ್ಮ ಮಕ್ಕಳೊಂದಿಗೆ ಸಿಕ್ಕಾಗ ಇದನ್ನು ನೆನಪಿಸಿಕೊಂಡು ಹೇಳುತ್ತಾರೆ.

ತರಗತಿಯ ಹಲವು ವಿದ್ಯಾರ್ಥಿಗಳೊಂದಿಗೆ 'ಅನಾಕೊಂಡಾ' ಎಂಬ ಜಗತ್ತಿನ ಅತಿದೊಡ್ಡ ಹಾವಿನ ಕಥೆ ಇದ್ದ ಚಲನಚಿತ್ರವನ್ನು ಸಿನಿಮಾ ಮಂದಿರದಲ್ಲಿ ನೋಡಿದ್ದು, ಆ ಸಿನಿಮಾ ಟಿವಿಯಲ್ಲಿ ನೋಡಿ, ತಮ್ಮ ಮಕ್ಕಳಿಗೂ ಯುಟ್ಯೂಬ್‌ನಲ್ಲಿ ತೋರಿಸಿ ನಂತರ ನನಗೆ ಅಂದಿನ ವಿದ್ಯಾರ್ಥಿಗಳು ಫೋನಾಯಿಸಿ ಖುಷಿಪಟ್ಟಿದ್ದಾರೆ. ಇದೆರಡು ಘಟನೆ ಉದಾಹರಣೆಗಾಗಿ. ನಾವೂ ಇಂಥ ಹಲವು ಸಂಗತಿಗಳನ್ನು ಮಾಡಬಹುದು. ನಮ್ಮೂರ ಬಳಿಯ ಪ್ರಸಿದ್ಧ ದೇವಸ್ಥಾನಕ್ಕೆ ಕರೆದೊಯ್ಯುವುದು. ನಮ್ಮೂರ ಬಳಿಯ ಬೆಟ್ಟಕ್ಕೆ ಕರೆದೊಯ್ಯುವುದು. ಸೈಕಲ್‌ಟ್ರಿಪ್ ಇತ್ಯಾದಿ.

ಈ ಎಲ್ಲ ಪ್ರಕ್ರಿಯೆಗಳಿಂದ ನಮ್ಮ ಹಾಗೂ ವಿದ್ಯಾರ್ಥಿಗಳ ಬಾಂಧವ್ಯ ಫೆವಿಕಾಲ್‌ನಂತೆ ಅಂಟಿಕೊಂಡಿರುತ್ತವೆ, ತಮ್ಮ ಅಧ್ಯಾಪಕರಲ್ಲಿ ಅವರಿಗೆ ಶ್ರದ್ಧೆ, ಅಭಿಮಾನಗಳು ಮೂಡುತ್ತವೆ, ನಮ್ಮ ಮಾರ್ಗದರ್ಶನದಂತೆ ನಡೆಯುತ್ತಾರೆ, ಓದು ಬರಹಗಳಲ್ಲೂ ಮುಂದಾಗುತ್ತಾರೆ, ಅವರ ಪೋಷಕರಿಗೂ ನಮ್ಮ ಬಗ್ಗೆ ವಿಶ್ವಾಸ ಮೂಡುತ್ತದೆ, ಅಂತಿಮವಾಗಿ ನಮ್ಮಲ್ಲೂ ಒಂದು ಧನ್ಯತಾಭಾವ ನೆಲಸುತ್ತದೆ.

**ಕೊನೆಯಲ್ಲಿ ನಿಮಗೂ ಇಂಥ ಅನುಭವಗಳಾಗಿದ್ದರೆ ಪತ್ರಿಕೆಗೆ ಪತ್ರ ಬರೆದು ಹಂಚಿಕೊಳ್ಳಿರಿ.** ●

# 1857 ಮೇ 10 ರ ಕಿಡಿ – ಸ್ವಾತಂತ್ರ್ಯದ ಮುನ್ನುಡಿ...

**ಭೀಮಸೇನ್ ಪುರೋಹಿತ್**
**ಡಾಟಾ ಸೈಂಟಿಸ್ಟ್**
**ಬೆಂಗಳೂರು**



1857 ಮೇ 10, ಅಂದು ನಡೆಯಲಿದ್ದ ಮಹಾ ಸಂಗ್ರಾಮಕ್ಕೆ ಸಾಕ್ಷಿಯಾಗಲು ಸೂರ್ಯ ಆಗ ತಾನೇ ಉದಿಸುತ್ತಿದ್ದ. ಮೀರತ್‌ನಲ್ಲಿದ್ದ 20 ನೆ ಪದಾತಿ ರೆಜಿಮೆಂಟಿನವರು ಮತ್ತು 3 ನೆ ಅಶ್ವಾರೋಹಿ ದಳದವರೂ ತಮ್ಮಲ್ಲಿ ಭುಗಿಲೆದ್ದಿದ್ದ ದೇಶಪ್ರೇಮದ ಜ್ವಾಲೆಯನ್ನು ಕಾಳ್ಗಿಚ್ಚಿನಂತೆ ಹರಡಿಸಲು ತವಕಿಸುತ್ತಿದ್ದರು. ಅದಕ್ಕೆ ಕಾರಣ 1857 ಏಪ್ರಿಲ್ 8 ರಂದು ನಡೆದ ಮಂಗಲ್ ಪಾಂಡೆಯ ಬಲಿದಾನ.

1857 ಮಾರ್ಚ್ 29 ರಂದೇ ಬ್ಯಾರಕ್ಪುರದ 19 ನೆ ರೆಜಿಮೆಂಟಿನ ಮಂಗಲ್ ಪಾಂಡೆ ಉಕ್ಕುತ್ತಿದ್ದ ದೇಶಪ್ರೇಮವನ್ನು ಬದಿಗೊತ್ತದೆ, ತನ್ನ ಸಹ–ಸೈನಿಕರನ್ನೆಲ್ಲಾ ಹುರಿದುಂಬಿಸುತ್ತ ಸ್ವಾತಂತ್ರ ಸಂಗ್ರಾಮಕ್ಕೆ ಶ್ರೀಗಣೇಶ ಮಾಡಿಯೇ ಬಿಟ್ಟ. ಸಾರ್ಜಂಟ್–ಮೇಜರ್ ಹ್ಯೂಸನ್‌ನನ್ನು ಗುಂಡಿಕ್ಕಿ ಕೊಂದು ರಣಕಹಳೆ ಊದಿದ. ಆ ಕಾರಣಕ್ಕಾಗಿಯೇ ಆತನನ್ನು ಏಪ್ರಿಲ್ 8 ರಂದು ನೇಣಿಗೇರಿಸಲಾಯಿತು.

ಇದರ ಜೊತೆ ಇನ್ನೊಂದು ಹೃದಯ–ವಿದ್ರಾವಕ ಘಟನೆಯೊಂದು ನಡೆಯಿತು. ಬ್ರಿಟಿಷರು ಕೊಟ್ಟಿದ್ದ ಕಾಡತೂಸುಗಳನ್ನು ಉಪಯೋಗಿಸಲು ನಿರಾಕರಿಸಿದ 85 ಜನ ದೇಶೀ ಸೈನಿಕರನ್ನು ಬೆತ್ತಲಾಗಿಸಿ, ಬೇಡಿಗಳನ್ನು ತೊಡಿಸಿ ಕಾರಾಗೃಹಕ್ಕೆ ತಳ್ಳಿದರು. ತಮ್ಮ ಮುಂದೆಯೇ ತಮ್ಮ ಸಹೋದರರಿಗಾದ ಅಪಮಾನವನ್ನು ನೋಡಿ ಉಳಿದ ಸೈನಿಕರು ಕುದ್ದು ಹೋದರು. ಇದು ನಡೆದಿದ್ದು ಮೇ 9 ರಂದು.

ಮೊದಲಿನ ನಿರ್ಧಾರದಂತೆ, ನಿಜವಾಗಿಯೂ 1857 ಮೇ 31 ರಂದು ಇಡೀ ದೇಶವೇ ಭುಗಿಲೇಳಬೇಕೆಂದು ನಾನಾ–ಸಾಹಿಬ್–ಪೇಶ್ವ , ರಾಣಿ ಲಕ್ಷ್ಮಿಬಾಯಿ ಅವರ ಸಹಮತದೊಂದಿಗೆ ನಿರ್ಣಯವಾಗಿತ್ತು. ಆದರೆ ಇಷ್ಟೆಲ್ಲಾ ಬ್ರಿಟಿಷರ ಕುಕೃತ್ಯಗಳಿಂದ ತಪ್ತರಾಗಿದ್ದ ಮೀರತ್‌ನ ಸಿಪಾಯಿಗಳು ಮೇ 31 ರ ತನಕ ಕಾಯುವ ತಾಳ್ಮೆಯನ್ನು ಕಳೆದುಕೊಂಡಿದ್ದರು. ಹೀಗಾಗಿ ಮೇ 10 ರಂದೇ ಆಂಗ್ಲರ ಮೇಲೆ ಆಕ್ರಮಿಸಲು ನಿರ್ಧರಿಸಿದರು. ಅವರ ಜೊತೆ ಸುತ್ತಲಿದ್ದ ಹಳ್ಳಿಗಳ ಜನರೂ ಕೈಗೂಡಿಸಿದರು.

ಹೀಗೆ ಒಟ್ಟುಗೂಡಿದ ಸಿಪಾಯಿಗಳು ಮತ್ತು ಜನರು, ಮೇ 10 ರ ಸಂಜೆ ಪ್ರಾರ್ಥನೆಗೆಂದು ಚರ್ಚ್‌ಗೆ ತೆರಳುತ್ತಿದ್ದ ಬಿಳಿಯರ ಮೇಲೆ 'ಹರ ಹರ ಮಹಾದೇವ್', 'ಮಾರೋ ಫಿರಂಗಿ ಕೋ'ಎಂದು ಕೂಗುತ್ತ ದಾಳಿ ನಡೆಸಿದರು. ಭಾರತೀಯರನ್ನು ಗುಲಾಮರೆಂದು ದಬ್ಬಾಳಿಕೆ ನಡೆಸುತ್ತಿದ್ದ ಬ್ರಿಟಿಷರನ್ನು ಸಂಹರಿಸಿದರು. ಜೊತೆಗೆ ಸೆರೆಮನೆಯಲ್ಲಿದ್ದ ದೇಶೀ ಸಿಪಾಯಿಗಳನ್ನೆಲ್ಲ ಬಿಡಿಸಿದರು. ಆ ಬಿಡುಗಡೆಯಾದ ಸಿಪಾಯಿಗಳೂ ಎಲ್ಲರ ಜೊತೆ ಸೇರಿ, ಆಕ್ರಮಣಕ್ಕೆ ಮುಂದಾದರು.

ಅಂದು ಭಾರತೀಯರ ಮನದಲ್ಲಿದ್ದ ಸೇಡಿನ ಅಗ್ನಿಯಲ್ಲಿ ಎಲ್ಲ ಬಿಳಿಯರೂ ಬೆಂದು ಹೋದರು. ಆದರೆ ಈ ಯಾವ ದಾಳಿಯಲ್ಲಿಯೂ ಭಾರತೀಯ ಸಿಪಾಯಿಗಳು ಯಾವ ಬ್ರಿಟಿಶ್–ಹೆಂಗಸನ್ನೂ ಅಪಮಾನಿಸಲಿಲ್ಲ ಅನ್ನೋದು ಭಾರತೀಯತೆಗೆ ಹಿಡಿದ ಕೈಗನ್ನಡಿ.

ಅದೆಷ್ಟೋ ಜನ ಬ್ರಿಟಿಷರು ಮುಖಕ್ಕೆ ಕಪ್ಪು ಬಣ್ಣ ಬಳಿದುಕೊಂಡು, ವೇಷ ಮರೆಸಿಕೊಂಡು, ದಿಕ್ಕಾಪಾಲಾಗಿ ಓಡಿಹೋದರು. ಹೀಗೆ ಮೇ 10 ರಂದು ಮೀರತ್‌ನಲ್ಲಿ ಪ್ರಾರಂಭವಾದ ಕ್ರಾಂತಿಕಿಡಿ ಕ್ರಮೇಣ ಕಾನ್ಪುರ, ಝಾನ್ಸಿ, ದೆಹಲಿ ತನಕ ಹಬ್ಬಿತು. ಆದರೂ ನಮ್ಮ ಸೈನ್ಯದಲ್ಲಿ ಇನ್ನೂ ಸಾಕಷ್ಟು ಪೂರ್ವತಯಾರಿ ಇಲ್ಲದಿದ್ದ ಕಾರಣ, ಬ್ರಿಟಿಷರ ಬೃಹತ್ ಸೈನ್ಯದ ಮುಂದೆ ಭಾರತೀಯ ಸಿಪಾಯಿಗಳ ಸಂಗ್ರಾಮ ಸೋಲಬೇಕಾಯಿತು.

ಈ ಪ್ರಥಮ–ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತಕ್ಕೆ ಯಶಸ್ಸು ದೊರೆಯದಿದ್ದರೂ, ಅದು ಬ್ರಿಟಿಷರ ಎದೆಯಲ್ಲಿ ನಡುಕ ಹುಟ್ಟಿಸಿದ್ದಂತೂ ಖಂಡಿತ. ಅಲ್ಲದೆ ಆ ಸಿಪಾಯಿಗಳ ದೇಶಭಕ್ತಿ, ಮುಂದೆ ಬಂದ ಅನೇಕ ಸ್ವಾತಂತ್ರ ಹೋರಾಟಗಾರರಿಗೆ ಸ್ಫೂರ್ತಿಯಾಯಿತು ಅನ್ನೋದೂ ಇತಿಹಾಸವಿದಿತ. ವೀರ ಸಾವರ್ಕರ್ ಅವರು ಈ ಪ್ರಥಮ–ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ಪುಸ್ತಕ ಬರೆದರು. ಅದು ಎಷ್ಟೊಂದು ಪ್ರಖರವಾಗಿತ್ತೆಂದರೆ ಆ ಪುಸ್ತಕ ಪ್ರಕಟಣೆಯಾಗುವುದಕ್ಕೂ ಮೊದಲೇ ವಿಶ್ವಾದ್ಯಂತ ಬ್ರಿಟಿಷರಿಂದ ನಿಷೇಧಿತವಾಗಿತ್ತು. ಆದರೂ ಹೇಗೋ ಭಾರತವನ್ನು ತಲುಪಿದ ಆ ಪುಸ್ತಕ ಸಹಸ್ರಾರು ಯುವ ಸ್ವಾತಂತ್ರ ಯೋಧರಲ್ಲಿ ಕಿಚ್ಚನ್ನು ತುಂಬಿತು. ಭಗತ್ ಸಿಂಗ್ ಮೂರು ಬಾರಿ ಈ ಪುಸ್ತಕವನ್ನು ಪ್ರಕಟಿಸಿದ. ನೇತಾಜಿ ಸುಭಾಷಚಂದ್ರ ಬೋಸರ ಅಜಾದ್ ಹಿಂದ್ ಫೌಜ್‌ನ ಸೈನಿಕರಿಗೆ ಪವಿತ್ರ ಗ್ರಂಥವಾಯಿತು. ಹೀಗೆ ಆರಂಭವಾದ ಸ್ವಾತಂತ್ರ ಸಂಗ್ರಾಮ ಅನೇಕ ಯುವಕರ ರುಧಿರಾಭಿಷೇಕದಿಂದ 1947 ಆಗಸ್ಟ್ 15 ಸ್ವತಂತ್ರವಾಯಿತು.

ಅಂದರೆ ನಮ್ಮ ಸ್ವಾತಂತ್ರಕ್ಕೆ ಅಡಿಗಲ್ಲನಿಟ್ಟ ಆ ಮೊದಲ ಸ್ವಾತಂತ್ರ್ಯ ಸಂಗ್ರಾಮ ಮೀರತ್‌ನಲ್ಲಿ ಆರಂಭವಾಗಿ ಇಂದಿಗೆ 154 ವರ್ಷ. ನಾವಾದರೂ ಆ ಭೀಕರ ಸಂಗ್ರಾಮವನ್ನು ಮತ್ತು ಅದರಲ್ಲಿ ಮಡಿದು ಹುತಾತ್ಮರಾದ ಹೋರಾಟಗಾರರನ್ನು ಒಮ್ಮೆ ನೆನೆಯೋಣ.

ಆ ಎಲ್ಲ ಸ್ವಾತಂತ್ರ್ಯ ಯೋಧರಿಗೆ ನನ್ನ ಭಾವಪೂರ್ಣ ಅಶ್ರುತರ್ಪಣ. •

ನಡತೆ ಬೋಧಿಸದ ಶಿಕ್ಷಣ, ಮನುಷ್ಯತ್ವ ತೋರದ ವಿಜ್ಞಾನ. ಇವೆರೆಡೂ ಅಪಾಯಕಾರಿ ಮತ್ತು ಉಪಯೋಗವಿಲ್ಲದವು – ನೀತಿವಚನ

ಭೂರಮೆ

# ಪ್ರಾತಃಸ್ಮರಣೀಯರು ಇವರೆಲ್ಲ...

■ ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

ಒಂದು ದೇಶದ ಸಂಸ್ಕೃತಿಯನ್ನು ಪರಂಪರಾಗತವಾಗಿ ವರ್ಗಾವಣೆ ಮಾಡುತ್ತ, ಬೆಳೆಸುತ್ತ ಬರುವ ಕಾರ್ಯದಲ್ಲಿ ನೆರವಾಗುವುದು ಆ ದೇಶದ ಇತಿಹಾಸ. ಅದಕ್ಕೇ ದೇಶದ ಇತಿಹಾಸವನ್ನು ತಿಳಿದುಕೊಳ್ಳುವುದು ಪ್ರತಿಯೊಬ್ಬ ಪ್ರಜೆಯ ಆದ್ಯ ಕರ್ತವ್ಯ. ಅದರಿಂದ ಒಬ್ಬ ಜವಾಬ್ದಾರಿಯುತ, ನಿಷ್ಠಾವಂತ ಪ್ರಜೆಯಾಗಿ ಬಾಳಲು ಬೇಕಾದ ಮಾರ್ಗದರ್ಶನದ ಮೊದಲ ಪಾಠ ಲಭ್ಯವಾಗುತ್ತದೆ.

'ಹಿಂದಣ ಹೆಜ್ಜೆಯನರಿತಲ್ಲದೆ ಮುಂದಿನ ಹೆಜ್ಜೆಯನಿಡಲಾಗದು' ಎಂಬ ಕವಿವಾಣಿಯಂತೆ ಹಿರಿಯರು ನಂಬಿ ನಡೆದ ಆದರ್ಶವೇ ನಮ್ಮನ್ನು ಕೈಹಿಡಿದು ನಡೆಸುವ ಗುರುವಾಗುತ್ತದೆ. ಆದ್ದರಿಂದ ಶಾಲಾ ಶಿಕ್ಷಣದ ಅವಧಿಯಲ್ಲಿ ಶಿಕ್ಷಕರಾದವರು ವಿದ್ಯಾರ್ಥಿಗಳಲ್ಲಿ ಇತಿಹಾಸದ ಬಗ್ಗೆ ಕುತೂಹಲವನ್ನು, ಇತಿಹಾಸ ಪ್ರೇಮವನ್ನು ಬೆಳೆಸಬೇಕಾದುದು ಅಗತ್ಯ. ಯಾವುದನ್ನೇ ಆದರೂ ಗುರು ಮುಖೇನ ತಿಳಿಯುವುದು ಪರಿಣಾಮಕಾರಿಯಾದುದರಿಂದ ಮಕ್ಕಳಿಗೆ ಪಠ್ಯಪುಸ್ತಕದಲ್ಲಿನ ವಿಚಾರಗಳೊಂದಿಗೆ ಐತಿಹಾಸಿಕ ಅಂಶಗಳನ್ನು ಸ್ವಾರಸ್ಯಕರವಾದ ರೀತಿಯಲ್ಲಿ ತಿಳಿಸಬೇಕಾದುದೂ ಅಗತ್ಯ. ಪ್ರಮುಖ ಐತಿಹಾಸಿಕ ವ್ಯಕ್ತಿಗಳನ್ನು ಮಕ್ಕಳಿಗೆ ಪರಿಚಯಿಸುವಾಗಲೂ ಅವರ ಸಾರ್ಥಕ ಬದುಕಿನ ಧ್ಯೇಯ, ಗುರಿಸಾಧನೆಯ ಮಾರ್ಗ ಎಲ್ಲವನ್ನೂ ಪರಿಣಾಮಕಾರಿಯಾಗಿ ತಿಳಿಸುವುದರೊಂದಿಗೆ ಆ ಗಟ್ಟಿ ವ್ಯಕ್ತಿತ್ವವು ರೂಪುಗೊಂಡ ಬಗೆಯನ್ನೂ ತಿಳಿಸಬೇಕು.



'ಜನನೀ ಜನ್ಮಭೂಮಿಶ್ಚಸ್ವರ್ಗಾದಪಿಗರೀಯಸೀ' ಎಂಬ ನಾಣ್ಣುಡಿಯಿದೆ. ಇದು ಪ್ರತಿಯೊಬ್ಬರ ಮನಸ್ಸಿನ ಭಾವನೆಯಾದರೆ ಆಗ, ಇದಕ್ಕೆ ತಳುಕು ಹಾಕಿಕೊಂಡು ಬರುತ್ತದೆ ರಾಷ್ಟ್ರೀಯತೆಯನ್ನು ಕುರಿತ ಅಭಿಮಾನ, ಈ ಭಾವನೆಯನ್ನು ಮನದಲ್ಲಿ ತುಂಬಿಕೊಂಡು ಬದುಕುತ್ತಾ ದೇಶವನ್ನು ಸ್ವತಂತ್ರಗೊಳಿಸಲು ತನು, ಮನ, ಧನಗಳನ್ನು ತ್ಯಾಗ ಮಾಡಿದ ಮಹಾನ್ ವ್ಯಕ್ತಿಗಳೆಲ್ಲ ನಮಗೆ ಪ್ರಾತಃಸ್ಮರಣೀಯರು.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು ಎಂದಕೂಡಲೇ ನೆನಪಾಗುವ ಮೊದಲ ಹೆಸರು ಝಾನ್ಸಿರಾಣಿ ಲಕ್ಷ್ಮೀಬಾಯಿ. ಕಣ್ಮುಂದೆ ಬರುವ ಚಿತ್ರ ಬೆನ್ನಿಗೆ ಮಗುವನ್ನು ಕಟ್ಟಿಕೊಂಡು, ಶಸ್ತ್ರಧಾರಿಣಿಯಾಗಿ, ಅಶ್ವಾರೂಢಿಯಾಗಿ ರಣಚಂಡಿಯಂತೆ ವೀರಾವೇಶದಿಂದ ಹೋರಾಡುತ್ತಿರುವ ವೀರ ಮಹಿಳೆ. ಈಕೆಯ ಕಥೆಯನ್ನು ಬಾಲ್ಯದಲ್ಲಿ ಓದಿ, ಕೇಳಿ ಮನಃಪಟಲದಲ್ಲಿ ಅಚ್ಚೊತ್ತಿರುವ ಅಂಶಗಳೇ ಇವು. ಬದುಕಿದ್ದು ಕೇವಲ ಮೂವತ್ತು ವರ್ಷ. ಮೂವತ್ತೇ ವರ್ಷಗಳಲ್ಲಿ ದೇಶದ ಇತಿಹಾಸವು ತನ್ನ ಪುಟಗಳಲ್ಲಿ ಈಕೆಯ ಧೀರ ವ್ಯಕ್ತಿತ್ವವನ್ನು ದಾಖಲಿಸಿಕೊಳ್ಳುವಂತೆ ಸಾರ್ಥಕ ಬದುಕು ನಡೆಸಿದ ರೀತಿ ಅನನ್ಯವಾದದ್ದು.

ದೇಶಪ್ರೇಮ, ಸ್ವಾಭಿಮಾನ, ಆತ್ಮವಿಶ್ವಾಸ, ಧೈರ್ಯ, ದೈವಭಕ್ತಿ, ಪಾಪಭೀರುತ್ವ, ಕ್ಷಮಾಗುಣ, ಉದಾತ್ತತೆ ಈ ಎಲ್ಲಾ ಗುಣಗಳ ಸಾಕಾರವಾಗಿದ್ದವಳು ಝಾನ್ಸಿಯ ರಾಣಿ ಲಕ್ಷ್ಮೀಬಾಯಿ. ಮೊದಲಿನ ಹೆಸರು ಮಣಿಕರ್ಣಿಕಾ ತಾಂಬೆ. ದೇಶದ ಸ್ವಾತಂತ್ರ್ಯಕ್ಕಾಗಿ ಕೊನೆಯುಸಿರಿರುವ ತನಕ ಹೋರಾಡುವೆನೆಂದು ಪ್ರತಿಜ್ಞೆ ಮಾಡಿದವಳು. ಬಾಲ್ಯದಿಂದಲೂ ಪಡೆದಿದ್ದ ಶೌರ್ಯ–ಪರಾಕ್ರಮಗಳ ಶಿಕ್ಷಣವನ್ನು ವ್ಯಕ್ತಿತ್ವದಲ್ಲಿ ಸಂಪೂರ್ಣ ಮೈಗೂಡಿಸಿಕೊಂಡು ಬೆಳೆದವಳು. ಜ್ಞಾನದೊಂದಿಗೆ ಸಚ್ಚಾರಿತ್ರ್ಯವನ್ನು ಪ್ರತಿಯೊಬ್ಬರೂ ಹೊಂದಿರಬೇಕೆಂಬ ಸತ್ಯವನ್ನು ತಿಳಿದು ಹಾಗೆಯೇ ಬೆಳೆದವಳು. ಇದೇ ಜೂನ್ 18 ಆಕೆ ವೀರಗತಿಯನ್ನು ಪಡೆದ ದಿನ.

1857ರ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಧೀರರಲ್ಲಿ ಈಕೆಯ ಹೆಸರು ಜಾಜ್ವಲ್ಯಮಾನವಾಗಿ ಬೆಳಗುತ್ತಿದೆ. "ನಾವು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತೇವೆ, ಯಶಸ್ವಿಯಾದರೆ ಗೆಲ್ಲುತ್ತೇವೆ, ಫಲವನ್ನು ಸಂಭ್ರಮದಿಂದ ಸವಿಯುತ್ತೇವೆ. ಪರಾಜಿತರಾದರೆ ಮತ್ತು ಯುದ್ಧಭೂಮಿಯಲ್ಲಿ ಕೊಲ್ಲಲ್ಪಟ್ಟರೆ ನಾವು ಖಂಡಿತವಾಗಿಯೂ ಮೋಕ್ಷ ವೈಭವವನ್ನು ಪಡೆದುಕೊಳ್ಳುತ್ತೇವೆ."

ತಾಯ್ನಾಡಿಗಾಗಿ ಹೀಗೆ ಬಲಿದಾನ ಮಾಡಿ ಹುತಾತ್ಮರೆನಿಸಿಕೊಂಡ ವೀರ ಮಹಿಳೆಯರು ಮತ್ತು ಪುರುಷರ ಕಥೆಗಳನ್ನು ಇತಿಹಾಸದ ಪುಟಗಳಲ್ಲಿ ಕಾಣುತ್ತೇವೆ. ಇವರೆಲ್ಲರ ಯಶಸ್ಸು, ಅಪಯಶಸ್ಸು ಭವಿಷ್ಯದಲ್ಲಿನ ಸುಧಾರಣೆಗೆ ಸಹಕಾರಿಯಾಗುತ್ತದೆ. ಆದರ್ಶ ವ್ಯಕ್ತಿತ್ವಗಳು ನಮ್ಮ 'ರೋಲ್ ಮಾಡೆಲ್'ಗಳಾಗುತ್ತವೆ. ನಾಯಕತ್ವದ ಆ ಲಕ್ಷಣಗಳು ನಮ್ಮನ್ನು

ಪುಟ 10 ಕ್ಕೆ ➤

ಶಿಕ್ಷಣವೆಂದರೆ ಮನಸ್ಸು, ದೇಹ, ಬುದ್ಧಿಗಳೊಂದಿಗೆ ದೊರೆಯುವ ಸಂಸ್ಕಾರ – ಹರ್ಡೀಕರ್ ಮಂಜಪ್ಪ

# ಮೂರು ಮನೆಗಳು ಕಲಿಸಿದ ಮನಮುಟ್ಟುವ ಮೂರು ಗುಣಗಳು

**ಚಿದಾನಂದ ಆ. ಪಾಟೀಲ**
ರಾಜ್ಯ ಪ್ರಧಾನಕಾರ್ಯದರ್ಶಿ
ಕ.ರಾ.ಮಾ.ಶಿ.ಸಂ.



ಸಮಾನತೆ, ಮನಃಪೂರ್ವಕ ಉತ್ಸಾಹ ಮತ್ತು ಬದ್ಧತೆ ಈ ಮೂರು ಗುಣಗಳನ್ನು ನಾನು ಕಲಿಯಲು ಸಹಾಯಕವಾದದ್ದು ನಮ್ಮ ಹಿರಿಯ ಕಾರ್ಯಕರ್ತರ ಮನೆಗಳಿಗೆ ಹೋದಾಗ. ABRSMನ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಗಳಾದ ಮಾನ್ಯ ಶ್ರೀ ಮಹೇಂದ್ರಕಪೂರ್‌ಜಿ ಅವರ ಕರ್ನಾಟಕದ ಭೇಟಿ ನಿಗದಿಯಾದಾಗ ಅವರಿಗಾಗಿ ಕಾರ್ಯಕರ್ತರ ಮನೆಗಳನ್ನು ಜೋಡಿಸುವುದು ಸಂಘದ ಕಾರ್ಯಕರ್ತರಿಗೆ ರೂಢಿಯಾಗಿರುವ ವಿಷಯ. ಹಾಗೆ ಏಪ್ರಿಲ್ 2019 ರ ಕೊನೆಯ ಅವಧಿಯಲ್ಲಿ ಭೇಟಿ ನೀಡಿದ ಕಪೂರ್‌ಜೀ ಅವರೊಂದಿಗೆ ನಮ್ಮ ಹಿರಿಯ ಕಾರ್ಯಕರ್ತರು ಮತ್ತು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಖಜಾಂಚಿಗಳಾದ ಶ್ರೀ ಜಗನ್ನಾಥ್ ಜೋಷಿಯವರ ಮನೆಗೆ ಸಂಜೆಯ ಊಟಕ್ಕಾಗಿ ಹೋದ ನಮಗೆಲ್ಲಾ ಸಂಘ ಕಲಿಸಿದ ಸಮಾನತೆಯ ಪಾಠದ ಪೂರ್ಣ ಪರಿಚಯವಾಯಿತು. 50 ವಸಂತ ಕಳೆದ ಮಾಧ್ಯಮಿಕ ಶಿಕ್ಷಕ ಸಂಘ ಕಾರ್ಯಕರ್ತರ ಮನದಲ್ಲಿ ಮಾಡಿದ ಪರಿವರ್ತನೆಯನ್ನು ನಾನು ಕಂಡದ್ದು, ಅನುಭವಿಸಿದ್ದು, ಜೋಷಿಯವರ ಧರ್ಮಪತ್ನಿಯವರು ನಮಗೆ ತೋರಿದ ಪ್ರೀತಿ, ವಿಶ್ವಾಸ ನಮ್ಮ ಮನ ತುಂಬಿತು. ಅದೇ ಸಂದರ್ಭದಲ್ಲಿ ಊಟ ಹೊಟ್ಟೆ ತುಂಬಿತ್ತು. ಸಮಾನತೆಯ ಅರ್ಥ ಬರೀ ಹೇಳುವಂತದ್ದಲ್ಲ, ಅದು ರೂಢಿಯಲ್ಲಿ ಕಾಣಬೇಕಾದದ್ದು ಎಂದು ತಿಳಿಯಿತು.

ಇನ್ನು ಬೆಳಿಗ್ಗೆ ಸಂಘದ ರಾಜ್ಯ ಉಪಾಧ್ಯಕ್ಷರಾದ ಶ್ರೀ ಬಿ.ಹೆಚ್. ವರದರಾಜು ಅವರ ಮನೆಯಲ್ಲಿ ಕಂಡದ್ದು ಹಬ್ಬದ ವಾತಾವರಣ. ಅವರ ಮನೆ ತಲುಪಿದ್ದು ಬೆಳಿಗ್ಗೆ 8.30 ಕ್ಕೆ, ಅಷ್ಟೊತ್ತಿಗೆ ಅವರು ಸ್ನೇಹಿತರೊಂದಿಗೆ ಒಡಗೂಡಿ ಮಹೇಂದ್ರ ಕಪೂರ್‌ಜಿಯವರ ಬರುವಿಕೆಗಾಗಿ ಕಾಯುತ್ತಿದ್ದರು. ನಾವು ಮನೆ ತಲುಪಿದಾಗ ಮನೆಯಲ್ಲಿ ಹಬ್ಬದ ವಾತಾವರಣ. ಅವರ ಶ್ರೀಮತಿಯವರು ನಮಗಾಗಿ 12 ತರಹದ ವಿವಿಧ ರೀತಿಯ ತಿಂಡಿ ಮಾಡಿದ್ದರು. ಇಲ್ಲಿ ನಾನು ಗಮನಿಸಿದ್ದು ಆ ಮಹಾತಾಯಿ ನಮಗಾಗಿ 3 ಘಂಟೆಯ ಆಸುಪಾಸು ಎದ್ದು, ತಾಯಿ ಮಮತೆಯಿಂದ ತಯಾರಿಸಿದ ತಿನಿಸುಗಳು ನಮ್ಮ ಹೊಟ್ಟೆ ಸೇರಿದಾಗ ನಾನು ಕಲಿತ ಪಾಠ ಅತಿಥಿ ದೇವೋಭವ. ಅಂದರೆ ಅತಿಥಿಗಳಲ್ಲಿ ದೇವರನ್ನು ಕಾಣುವ ಭಾರತೀಯ ಸಂಸ್ಕೃತಿ, ಸಂಘ ಕಲಿಸುವ ಗುಣಗಳಲ್ಲಿ ಒಂದು. ಸಂಘ ಎಲ್ಲಿದೆ ಎಂದರೆ ಸಂಘ ಕಾರ್ಯಕರ್ತರ ಮತ್ತು ಅವರ ಮನೆಯವರ ಮನದಲ್ಲಿದೆ. ಅದು ಕಿರಿಯ ಕಾರ್ಯಕರ್ತರಿಗೂ ಪೂರಕವಾಗಿದೆ.

ಮುಗ್ಧತೆಯ ಹರಿಕಾರ, ಸಂಘ ನಿಷ್ಠೆ ಮತ್ತು ಬದ್ಧತೆಗೆ ಇನ್ನೊಂದು ಹೆಸರು ಬೆಂಗಳೂರು ದಕ್ಷಿಣ ಜಿಲ್ಲೆಯ ಅಧ್ಯಕ್ಷರಾದ ಬಿ.ಎ. ಸುರೇಂದ್ರ ಅವರ ಈ ಗುಣಗಳೇ ಮಹೇಂದ್ರ ಕಪೂರ್‌ಜೀಯವರಿಗೆ ಅವರ ಮನೆಗೆ ಹೋಗಲೇ ಬೇಕು ಅನಿಸಿದ್ದು. ಅವರ ಮನೆ ತಲುಪಿದಾಗ ರಾತ್ರಿ 8 ಘಂಟೆ. ಮನೆಯಲ್ಲಿ ಸಹಜವಾಗಿ ಮಾತನಾಡುತ್ತಾ ಕುಳಿತಾಗ ಆ ಮನೆಯ ತಾಯಿಯ ಸದ್ದು ಕೇಳಿಸಲಿಲ್ಲ. ಅದಕ್ಕಾಗಿ ಸುರೇಂದ್ರ ಅವರನ್ನು ಕೇಳಿದಾಗ ಅವರು ಮಾತು ಪ್ರಾರಂಭಿಸಿದ್ದು. "ಜೀ, ನನ್ನ ಶ್ರೀಮತಿಯವರು ಊರಿಗೆ ಹೋದರು. ಆದರೆ ಅವರು ನಮಗಾಗಿ ಹೋಳಿಗೆ ಅಡುಗೆ ತಯಾರಿಸಿ ಎಲ್ಲವನ್ನು ಜೋಡಿಸಿ ಇಟ್ಟು ಹೋಗಿದ್ದಾಗಿ, ಬಡಿಸಿಕೊಂಡು ಊಟ ಮಾಡುವುದಷ್ಟೆ ಬಾಕಿ" ಎಂದರು. ಮತ್ತೆ ಯಾಕೆ ಊರಿಗೆ ಹೋದರು? ಎನ್ನುವ ನಮ್ಮ ಪ್ರಶ್ನೆಗೆ ಸುರೇಂದ್ರ ಅವರು ಹೇಳಿದ ಘಟನೆ ನಮ್ಮ ಕಾರ್ಯಕರ್ತರಿಗೆ ಮಾದರಿಯಾದದ್ದು. ಸುರೇಂದ್ರ ಅವರ ಪತ್ನಿ ತಮ್ಮ (ಭಾವಮೈದುನ) ಅದೇ ದಿನ ಮಧ್ಯಾಹ್ನ ಮನೆಯ ಮೇಲಿಂದ ಬಿದ್ದು, ಮೂಳೆ ಮುರಿದು ಕೊಂಡು ಆಸ್ಪತ್ರೆ ಸೇರಿದ್ದರು. ಈ ಘಟನೆಯಾದ ಮೇಲೆ ಆ ಮಹಾತಾಯಿ ನಮಗಾಗಿ, ಊಟ ತಯಾರಿಸಿ, ಜೋಡಿಸಿ ಇಟ್ಟು ತವರು ಮನೆಗೆ ಹೋಗಿದ್ದರು. ಈ ಘಟನೆ ಹೇಳುತ್ತಿದ್ದ ಹಾಗೆ ಮೊದಲೇ ಹೇಳಬಾರದಿತ್ತಾ? ಎಂದಾಗ, ಅವರು ಉತ್ತರಿಸಿದ ರೀತಿ ನಮಗೆಲ್ಲಾ ಜೀವನದ ಬಹುದೊಡ್ಡ ಪಾಠ. " ಜೀ, ಒಂದು ಕೆಲಸ ನಿರ್ಧಾರ ಆದ ಮೇಲೆ ಅದಕ್ಕೆ ನಮ್ಮ ಬದ್ಧತೆ ಇರಬೇಕು, ನಿರ್ಧಾರ ಆದ ಮೇಲೆ ಮುಗಿಯಿತು" ಎಂದು ಅವರು ಹೇಳಿದಾಗ ನಾನು ಗಮನಿಸಿದ್ದು ಮಾಧ್ಯಮಿಕ ಶಿಕ್ಷಕ ಸಂಘದ ಹಿರಿಯರು, ಕಾರ್ಯಕರ್ತರಲ್ಲಿ ಬೆಳೆಸಿದ ಬದ್ಧತೆ, ನಿಷ್ಠೆ ಎಂತಹುದು ಎಂದು. ಕಾರ್ಯಕರ್ತರ ಮನೆಯಲ್ಲಿ ಸಂಘ ನೆಲೆಯೂರಿದ ರೀತಿ ಎಂತಹುದು ಎನ್ನುವುದನ್ನು ಈ ಮನೆಯಲ್ಲಿ ನಾನು ಕಂಡೆ.

ಇವೆಲ್ಲವುಗಳನ್ನು ಗಮನಿಸಿದಾಗ ನನಗೆ ಅನಿಸಿದ್ದು ಎಂದರೆ ಸಂಘ ಕಟ್ಟುವುದು ಎಂದರೆ ಕಾರ್ಯಕರ್ತರ ಮನಸ್ಸುಗಳನ್ನು ಕಟ್ಟುವುದು. ವ್ಯಕ್ತಿಯ ಪರಿವರ್ತನೆಯಲ್ಲಿ ಸಮಾಜದ ಪರಿವರ್ತನೆ. ವ್ಯಕ್ತಿಯ ಧನಾತ್ಮಕ ಬದಲಾವಣೆಯೇ ಸಮಾಜದ ಬದಲಾವಣೆ. ಪ್ರಥಮ ಪುರುಷಿ ಮನೋಭಾವ ಬೆಳೆಸಿಕೊಂಡಾಗ ನಾವು ಸಂಘ, ಸಮಾಜ, ರಾಷ್ಟ್ರ ಕಟ್ಟುವ ಕಟ್ಟಾಳುಗಳು ಆಗಬಹುದಲ್ಲವೇ?

•

ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ – ಪುರಂದರದಾಸರು

# ಮತದಾನ ಜಾಗೃತಿಯಲ್ಲಿ ಶಿಕ್ಷಕನ ಪಾತ್ರ

**ಶ್ರೀಮತಿ ಸುನಿತಾ ಗಂಗಾಧರ್**
**ಬೆಂಗಳೂರು**

'ಭಾರತ ' ಜಗತ್ತಿನ ಅತಿ ದೊಡ್ಡ ಪ್ರಜಾಸತ್ತಾತ್ಮಕ ರಾಷ್ಟ್ರ. ರಾಜಕೀಯ ಬದಲಾವಣೆಯ ಪರ್ವಕಾಲವನ್ನು ಎದುರಿಸುತ್ತಿರುವ ಪ್ರಸಕ್ತ ಎಲ್ಲ ರಾಷ್ಟ್ರಗಳ ದೃಷ್ಟಿಯು ಇಂದು ಭಾರತದತ್ತ ತಿರುಗಿದೆ ಎಂದರೆ ತಪ್ಪಾಗಲಾರದು.

ವರ್ಷದಿಂದ ವರ್ಷಕ್ಕೆ ಏರುತ್ತಿರುವ ಬಿಸಿಲಿನ ತಾಪದಂತೆಯೇ ರಾಜಕೀಯದ ಬಗ್ಗೆ ಜನಾಭಿಪ್ರಾಯವು ಕಾವು ಪಡೆಯುತ್ತಿದೆ. ಏಳು ದಶಕಗಳ ಸ್ವಾತಂತ್ರ್ಯದ ಹಾದಿಯಲ್ಲಿ ಸಾಕಷ್ಟು ಬದಲಾವಣೆಯ ಗಾಳಿ ಬೀಸಿದೆ. ಟಿ.ವಿ., ಪತ್ರಿಕಾಮಾಧ್ಯಮ, ಸಾಮಾಜಿಕ ಜಾಲತಾಣಗಳು ವಿಷಯದ ಚಿತ್ರಣಗಳನ್ನು ನೇರ ಜನರ ಬಳಿಗೆ ತಲುಪಿಸುವುದರಿಂದ ಎಲ್ಲಾ ರಂಗಗಳ ತಿಳುವಳಿಕೆ ಹಾಗೂ ಅವುಗಳ ಪ್ರತಿ ಜನರ ಅಭಿಪ್ರಾಯವು ಕೂಡ ದೇಶದಲ್ಲಾಗುವ ಬದಲಾವಣೆಗೆ ಕಾರಣೀಭೂತವಾಗಿದೆ.

28 ಲೋಕಸಭಾ ಸ್ಥಾನಗಳನ್ನು ಹೊಂದಿರುವ ಕರ್ನಾಟಕದಲ್ಲಿ ಏಪ್ರಿಲ್ 18 ಹಾಗೂ ಏಪ್ರಿಲ್ 23 ರಂದು 2 ಹಂತಗಳಲ್ಲಿ 14/14 ಸ್ಥಾನಗಳಿಗೆ 2019 ರ ಮತದಾನ ಸಂಪೂರ್ಣಗೊಂಡಿತು. ಮೇ 23ರಂದು ಮತದಾರ ನಿರ್ಣಯಿಸಿದ ರಾಜಕೀಯ ನಾಯಕರ ಹಣೆಬರಹ ಹೊರಬೀಳಲಿದೆ(ಪತ್ರಿಕೆ ನಿಮ್ಮ ಕೈ ಸೇರುವ ವೇಳೆಗೆ ರಾಜಕೀಯ ನಾಯಕರ ಹಣೆಬರಹ ಗೊತ್ತಾಗಿರುತ್ತದೆ).

ಏನೆಲ್ಲಾ ಬದಲಾವಣೆಗಳಾದರೂ ಮತದಾನ ಮಾಡಬೇಕಾದ ಸಂದರ್ಭದಲ್ಲಿ ಮತದಾನ ಮಾಡುವವರ ಸಂಖ್ಯೆ ಗಣನೀಯವಾಗಿ ಇಳಿಕೆಯಾಗುತ್ತಿರುವುದು ವಿಷಾದನೀಯ ಹಾಗೂ ಅಪಾಯಕಾರಿ ಬೆಳವಣಿಗೆಯೂ ಹೌದು. ಇದನ್ನು ಗೌಣವಾಗಿ ಪರಿಗಣಿಸದೆ ಈ ಮಟ್ಟಿನ ನಿರಾಶಾದಾಯಕ ಪ್ರತಿಕ್ರಿಯೆಗೆ ಕಾರಣ ಅರಿಯುವ ಹಾಗೂ ಆ ನಿಟ್ಟಿನಲ್ಲಿ ಅದನ್ನು ಸುಧಾರಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು ಜಾರಿಗೊಳಿಸುವ ಕೆಲಸವಾಗಬೇಕಿದೆ. ನಮ್ಮ ಭಾರತದೇಶ ವಿಶಿಷ್ಟ ರೀತಿಯ ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಿರುವುದೇ ಒಂದು ಗೌರವದ ವಿಷಯ. ಏಕೆಂದರೆ ಗ್ರಾಮಪಂಚಾಯಿತಿ ಸದಸ್ಯನಿಂದ ಹಿಡಿದು ರಾಷ್ಟ್ರಪತಿ ಆಯ್ಕೆವರೆಗೂ ಮತದಾನದ ಮುಖಾಂತರ ಆಯ್ಕೆ ಮಾಡಲಾಗುತ್ತದೆ. ಆದ್ದರಿಂದ ಇಲ್ಲಿ ಪ್ರಜೆಗಳ ನಿರ್ಧಾರದಂತೆಯೇ ದೇಶವನ್ನು ಮುನ್ನಡೆಸುವ ವ್ಯಕ್ತಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆದ್ದರಿಂದ ಪ್ರಜೆಗಳೇ ಪ್ರಭುಗಳು. ಒಂದು ದೇಶದ ಅಭಿವೃದ್ಧಿ, ಭದ್ರತೆ, ರಚನಾತ್ಮಕ ಕೆಲಸಗಳ ನಿರ್ಣಯ ಕೈಗೊಳ್ಳಬೇಕಾದರೆ ನಿಸ್ವಾರ್ಥ, ಸೇವಾಮನೋಭಾವದ, ದೇಶವೇ ನನ್ನ ಮನೆ ಎಂಬ ವಿಶಾಲ ಮನೋಭಾವದ ವ್ಯಕ್ತಿಗಳನ್ನು ಆಯ್ಕೆ ಮಾಡಬೇಕಾಗುತ್ತದೆ. ಪ್ರಜ್ಞಾವಂತ ಮತದಾರರ ಪ್ರಮಾಣ ಹೆಚ್ಚಬೇಕಾದದ್ದು ಅನಿವಾರ್ಯವಾಗಿದೆ. ವಿದ್ಯಾವಂತರೇ ಇಂದು ಮತದಾನ ಮಾಡದೇ, ಅವಿದ್ಯಾವಂತರು ಸ್ಪರ್ಧಿಗಳ ಆಸೆ-ಆಮಿಷಗಳಿಗೆ ಬಲಿಯಾಗಿ ಅಸಮರ್ಥ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದಲ್ಲಿ ದೇಶ ದುರ್ಬಲವಾಗುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

ಸಮಾಜದಲ್ಲಿ ಬದಲಾವಣೆಯನ್ನು ತರಬಲ್ಲ ಪ್ರಬಲ ಕ್ಷೇತ್ರ ಶಿಕ್ಷಣ ರಂಗ. ಶಿಕ್ಷಕರು ದೇಶದ ಭವಿಷ್ಯವಾದ ಮಕ್ಕಳನ್ನು ಯೋಗ್ಯ ರೀತಿಯಲ್ಲಿ ರೂಪಿಸುವ ಜವಾಬ್ದಾರಿಯನ್ನು ಹೊತ್ತಿದ್ದು ಪ್ರಸಕ್ತ ಪರಿಸ್ಥಿತಿಯಲ್ಲಿ ಆ ಜವಾಬ್ದಾರಿ ಇನ್ನು ಹೆಚ್ಚಾಗಿದೆ. ಶಿಕ್ಷಣ ಕ್ಷೇತ್ರದ ಬಗ್ಗೆ ಹೇಳಬೇಕಾದರೆ ಶಿಕ್ಷಕ ಮಗುವನ್ನು ಸಮಾಜಕ್ಕೆ ಜೋಡಿಸುವ ಕೊಂಡಿಯಾಗಿ ಕಾರ್ಯನಿರ್ವಹಿಸಿತ್ತಾನೆ. ಮನೆಯಿಂದ ಶಾಲೆಗೆ ಬಂದ ಮಗು ಸಮುದಾಯಕ್ಕೆ ಜೋಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಮಗುವಿಗೆ ಸಮಾಜದ ಔಚಿತ್ಯ, ಮಹತ್ವ, ಸಮಾಜದ ಪ್ರತಿ ನಮ್ಮ ಕರ್ತವ್ಯ ಎಲ್ಲವನ್ನು ವಿಶದೀಕರಿಸಬೇಕಾದ ಕೆಲಸ ಶಿಕ್ಷಕ ಮಾಡಿಯೇ ಇರುತ್ತಾರೆ. ಆ ದಿಶೆಯಲ್ಲಿ ಪಠ್ಯಗಳಲ್ಲೂ ಕೂಡ ವಿದ್ಯಾರ್ಥಿಗಳ ಜವಾಬ್ದಾರಿ ಅರಿಯುವ, ಸಾಮಾಜಿಕ ವ್ಯವಸ್ಥೆಗಳ ಸ್ಪಷ್ಟ ಚಿತ್ರಣವಿರುವ ಪಠ್ಯಗಳು, ರಾಜ್ಯಶಾಸ್ತ್ರದ ತಿಳುವಳಿಕೆಯ ಪಾಠಗಳಿರುವಂತೆ ಶಿಫಾರಸ್ಸು ಮಾಡಬೇಕಿದೆ. ಕೇವಲ ಅಂಕಗಳಿಗೆ, ಇಂಗ್ಲೀಷ್ ವ್ಯಾಮೋಹಕ್ಕೊಳಗಾಗಿ ದೇಶದ ಬಗ್ಗೆ ಅಸಡ್ಡೆ ಬೆಳಸಿಕೊಳ್ಳದಂತಹ ವಾತಾವರಣ ನಿರ್ಮಾಣವಾಗಬೇಕಿದೆ.

ಸಮಾಜ ಸುಭದ್ರವಾಗಿರಲು, ದೇಶ ಅನಿಶ್ಚತತೆ ಹೊಂದದಿರಲು ಪ್ರತಿ ಪ್ರಜೆಯೂ ತನ್ನ ಸಾಮಾಜಿಕ ಬದ್ಧತೆ ಮೆರೆಸಬೇಕಿದ. ಆ ಬದ್ಧತೆ ಕಲಿಸಲು ಪರಿವಾರ, ಶಿಕ್ಷಕ, ಸಮಾಜ ಪರಸ್ಪರ ಪೂರಕವಾಗಿ ಕಾರ್ಯ ನಿರ್ವಹಿಸಬೇಕಿದೆ. ಮತದಾನದಂತಹ ಪವಿತ್ರ ಕಾರ್ಯದ ಮೂಲಕ ನಮ್ಮ ಅಸ್ತಿತ್ವವಷ್ಟೇ ಅಲ್ಲ, ದೇಶದ ಅಸ್ತಿತ್ವದ ಉಳಿವು ಅನ್ನೋ ಸತ್ಯ ಅರಿಯಬೇಕಿದೆ. ಕೇವಲ ನನ್ನೊಬ್ಬ(ನ)ಳ ಮತದಿಂದೇನಾಗಬೇಕಿದೆ ಎಂಬ ಉದಾಸೀನತೆ ತೊಲಗಬೇಕಿದೆ.

ಶಿಕ್ಷಕ ವಿದ್ಯಾರ್ಥಿಗಳಿಗೆ ಮತದಾನದ ಮಹತ್ವ ತಿಳಿಸುವ ವಿಷಯವನ್ನು ನಾಟಕಗಳು, ಚಿತ್ರಕಲಾ ಸ್ಪರ್ಧೆ, ಹಾಡಿನ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ವಿದ್ಯಾರ್ಥಿಗಳ ಮೆಚ್ಚಿನ ನಾಯಕ, ಅವರ ಸೇವೆ, ಮತದಾನದ ಮಹತ್ವದ ಭಾಷಣ ಸ್ಪರ್ಧೆ ಏರ್ಪಡಿಸಿ ಮಕ್ಕಳು ಇಂಥ ವಿಷಯದಲ್ಲಿ ಭಾಗವಹಿಸುವಂತೆ ಪ್ರೇರೆಪಿಸಬೇಕು.

ವಿಷಯದ ಬಗ್ಗೆ ಪರಿಣಿತಿ ಪಡೆದ ಶಿಕ್ಷಕರನ್ನು ಬೇರೆ ಬೇರೆ ಶಾಲೆಗಳಿಗೂ ಹೋಗಿ ವಿಷಯ ಮಂಡನೆ ಮಾಡಿ, ಮಕ್ಕಳ ಮನದಲ್ಲಿ ಮತದಾನದ ಮಹತ್ವ, ರಾಜಕೀಯದ ಅರಿವಿನ ಅನಿವಾರ್ಯತೆಯ ಬಗ್ಗೆ ಬೆಳಕು ಬೀರಬೇಕಿದೆ. ಶಿಕ್ಷಕರಿಂದ ಮತದಾನದ ಮಹತ್ವ ಮತ್ತು ಒಳ್ಳೆಯ ಅಭ್ಯರ್ಥಿಯ ಆಯ್ಕೆ ಮಾಡಿಸುವಂತಹ ಬದಲಾವಣೆಯನ್ನು ಮಾಡಿಸಬಹುದೆಂದು ಸರ್ಕಾರವೂ ಕೂಡ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಆ ದಿಶೆಯಲ್ಲಿ 'ಸ್ವೀಪ್'ನಂತಹ ಯೋಜನೆಯಲ್ಲಿ ಶಿಕ್ಷಕರಿಗೆ ಕಾರ್ಯಾಗಾರ, ತರಬೇತಿ ಇದ್ದು ಶಿಕ್ಷಕರನ್ನು ಈ ಕಾರ್ಯಕ್ಕೆ

ಪುಟ 10 ಕ್ಕೆ ➢

➢ ಪುಟ 7 ರಿಂದ..... ಪ್ರಾತಃಸ್ಮರಣೀಯರು...

ಆ ದಾರಿಯಲ್ಲಿ ನಡೆಯಲು ಪ್ರೇರೇಪಿಸುತ್ತವೆ. ಇತಿಹಾಸದ ಅಧ್ಯಯನ ನಮಗೆ ಪ್ರಮುಖವೆನಿಸುವುದು ಇಲ್ಲಿ.

ನಮ್ಮ ಶಿಕ್ಷಣದ ಆಯ್ಕೆ ವೃತ್ತಿಪರವಾಗಿ ಯಾವುದೇ ಇರಲಿ, ಇತಿಹಾಸ ಪ್ರೇಮ ಅದಕ್ಕೆ ಸಂಬಂಧಿಸಿದ್ದಾಗಿರುವುದಿಲ್ಲ. ಏಕೆಂದರೆ ಅದು ಕೇವಲ ಒಂದು ಕಾಲ ಮತ್ತು ಸ್ಥಳವನ್ನು ಮಾತ್ರವೇ ನಿರ್ದೇಶಿಸದೆ ಸಾರ್ವಕಾಲಿಕವಾಗಿ ಜೀವನಮೌಲ್ಯಗಳನ್ನು ಪ್ರತಿಬಿಂಬಿಸುತ್ತದೆ. ಅಲ್ಲಿ ಮನುಷ್ಯತ್ವದ ಪಾಠವಿರುತ್ತದೆ. ಬದುಕಿನ ಕರ್ತವ್ಯದ ಬೋಧನೆಯಿರುತ್ತದೆ. ಅದನ್ನು ಪಾಲಿಸಲು ಅಗತ್ಯವಾದ, ಸಹಕಾರಿಯಾಗುವ ಆದರ್ಶವ್ಯಕ್ತಿಗಳು ಅಲ್ಲಿ ಕಾಣುತ್ತಾರೆ. ಶಿಕ್ಷಣದ ಅನುಷ್ಠಾನ ಬದುಕಿನಲ್ಲಿ ಯಾವ ರೀತಿಯಿರಬೇಕೆಂಬ ಸೂಚನೆ, ಮಾದರಿ ಅಲ್ಲಿ ಲಭಿಸುತ್ತದೆ. ಒಳಿತು, ಕೆಡುಕುಗಳ ಬಗ್ಗೆ ನಮ್ಮ ನಿರ್ಧಾರಗಳ ಸಾಧಕ–ಬಾಧಕಗಳ ಬಗ್ಗೆ ಚಿಂತನೆ ಮಾಡುವ ಅಭ್ಯಾಸ, ಸಾಮರ್ಥ್ಯ ಬೆಳೆಸಿಕೊಳ್ಳುವ ಅವಕಾಶ ನಮಗಲ್ಲಿ ದೊರೆಯುತ್ತದೆ.

ಭಾರತದಂತಹ ಇತಿಹಾಸ ಶ್ರೀಮಂತಿಕೆಯಿರುವ ದೇಶದಲ್ಲಂತೂ ದೊರಕುವ ಸಾಮಗ್ರಿಗಳು ಜೀವನಾನುಭವದ ಅಮೂಲ್ಯ ಭಂಡಾರವೇ ಆಗಿವೆ. ರಾಜಕೀಯ, ಸಾಮಾಜಿಕ, ಧಾರ್ಮಿಕ ಎಂಬ ಎಲ್ಲ ಕ್ಷೇತ್ರಗಳಲ್ಲಿಯ ಆದರ್ಶಪ್ರಾಯರೆನಿಸಿದ, ಭವಿಷ್ಯದ ಜನಾಂಗಕ್ಕೆ ಮಾರ್ಗಸೂಚಿಯಾಗಿ ಬದುಕಿದವರ ಸಾಧನೆಗಳು ಅಪಾರ ಸಂಖ್ಯೆಯಲ್ಲಿವೆ. ಅದೆಲ್ಲವನ್ನು ತಿಳಿಯುವ, ಅಗತ್ಯವಾದ ರೀತಿಯಲ್ಲಿ ಬಳಸಿಕೊಳ್ಳುವ ಶ್ರದ್ಧೆ, ಪ್ರಾಮಾಣಿಕ ಪ್ರಯತ್ನ ವರ್ತಮಾನದಲ್ಲಿರುವವರಿಂದ ನಡೆಯಬೇಕಷ್ಟೆ.

ಅಂದರೆ, ಒಂದು ಇತಿಹಾಸವನ್ನೇ ನಿರ್ಮಿಸಿದ ಹಲವಾರು ಧೀಮಂತ ಪುರುಷರು, ಮಹಿಳೆಯರು ನಮ್ಮ ಪರಂಪರೆಯಲ್ಲಿ ಸಂದು ಹೋಗಿರುವಾಗ ಅವರೆಲ್ಲರನ್ನು ಕುರಿತ ವಿಚಾರಗಳನ್ನು ಸರಿಯಾದ ಆಕರಗಳ ಮೂಲಕ ತಿಳಿದುಕೊಳ್ಳಬೇಕಾದುದು ಅತಿ ಮುಖ್ಯ. ಏಕೆಂದರೆ ನಮ್ಮ ದೇಶವು ಹೊರಗಿನ ಆಕ್ರಮಣಗಳಿಗೆ ಅನೇಕ ಬಾರಿ ಗುರಿಯಾಗಿರುವುದಷ್ಟೇ ಅಲ್ಲ, ದೇಶವನ್ನೇ ಆವರಿಸಿ, ಸರ್ವತೋಮುಖವಾದ ಮಾಲಿನ್ಯವನ್ನು ಆ ಆಕ್ರಮಣಕಾರಿಗಳು ಮಾಡಿರುವುದಲ್ಲದೆ ನಮ್ಮ ದೇಶದ ಇತಿಹಾಸವನ್ನು ಕೂಡ ತಮಗೆ ಬೇಕಾದಂತೆ ವಿಕೃತಗೊಳಿಸಿ ಮುಂದಿನ ಜನಾಂಗವನ್ನು ಸಂಪೂರ್ಣವಾಗಿ ಅಂಧಕಾರದಲ್ಲಿಡುವ ದುಷ್ಟಕಾರ್ಯವನ್ನೂ ಮಾಡಿದ್ದಾರೆ. ನಾವು ಯಾರನ್ನು ಆದರ್ಶವ್ಯಕ್ತಿಗಳೆಂದು ತಿಳಿದಿದ್ದೇವೆಯೋ ಅವರ ನಿಜವಾದ ವ್ಯಕ್ತಿತ್ವವನ್ನು ಮರೆಮಾಡಿ ತಮ್ಮ ಪರಾಕ್ರಮವನ್ನೋ, ಬುದ್ಧಿವಂತಿಕೆಯನ್ನೋ ಮೇಲ್ಮೈಯಾಗಿರುವಂತೆ ಬಿಂಬಿಸಿರುವ, ಮೂಲಕ್ಕಿಂತ ಭಿನ್ನವೇ ಆದ ದೇಶದ ಇತಿಹಾಸ ನಿರ್ಮಾಣ ಅಂತಹವರಿಂದ ನಡೆದಿದೆ. ಆದ್ದರಿಂದ ಇತಿಹಾಸ ಅಧ್ಯಯನ ಮಾಡುವಾಗ ಅದರ ಸತ್ಯಾಸತ್ಯತೆಯ ಕುರಿತು ಪರಾಮರ್ಶೆ ಮಾಡಿ ವಿಚಾರಗಳನ್ನು ತಿಳಿಯುವುದು ಅಗತ್ಯ. ಇದರಲ್ಲಿ ಶಾಲೆಯ ಪಾತ್ರವೂ ಮಹತ್ತ್ವದ್ದೇ. ಶಿಕ್ಷಕರಾದ ನಾವು ವಿದ್ಯಾರ್ಥಿಗಳಿಗೆ ನಮ್ಮ ಇತಿಹಾಸದಲ್ಲಿನ ವ್ಯಕ್ತಿಗಳನ್ನು ಸರಿಯಾದ ರೀತಿಯಲ್ಲಿ ಪರಿಚಯಿಸಿ ಅದೆಲ್ಲವೂ ಅವರ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಲ್ಲಿ ಸಕಾರಾತ್ಮಕವಾದ ಪಾತ್ರವನ್ನು ವಹಿಸುವಂತೆ ಗಮನಿಸ ಬೇಕಾಗುತ್ತದೆ.

ಈ ಎಲ್ಲ ಹಿನ್ನೆಲೆಯೊಂದಿಗೆ ನಮ್ಮ ದೇಶದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಮುಂಚೂಣಿಯಲ್ಲಿ ಬೆಳಗುತ್ತಿರುವ ಝಾನ್ಸಿರಾಣಿಲಕ್ಷ್ಮೀಬಾಯಿಯ ದೇಶಪ್ರೇಮ, ಎಂತಹ ಸಮಯದಲ್ಲಿಯೂ ದುಷ್ಟರಿಗೆ ತಲೆಬಾಗುವುದಿಲ್ಲವೆಂಬ ಸ್ವಾಭಿಮಾನ, ದೌರ್ಜನ್ಯವನ್ನು, ಅನ್ಯಾಯವನ್ನು ಪ್ರತಿಭಟಿಸುವ ಕೆಚ್ಚು, ನಾಯಕತ್ವದ ಸಾಮರ್ಥ್ಯ, ನಂಬಿದವರನ್ನು ಎಂತಹ ಸಮಯದಲ್ಲಿಯೂ ರಕ್ಷಿಸುವ ಬದ್ಧತೆ ಎಲ್ಲವೂ ಕೇವಲ ಹೆಣ್ಣುಮಕ್ಕಳಿಗೆ ಮಾತ್ರವಲ್ಲ, ಪ್ರತಿಯೊಬ್ಬರೂ ಅನುಸರಿಸುವಂತಹ ಗುಣಗಳೇ ಆಗಿವೆ.

ಹಾಗೆ ಮಾಡುತ್ತ ಸಮಾಜಮುಖಿಯಾಗಿ ಬೆಳೆಯುವ ಪ್ರಯತ್ನ ಮಾಡಿದಾಗಲೇ ನಮ್ಮ ಪರಂಪರೆಯನ್ನು ಉಳಿಸಿ, ಬೆಳೆಸುತ್ತಾ ಭವಿಷ್ಯದ ಕಡೆಗೂ ಕೊಂಡೊಯ್ಯುವ ಕಾರ್ಯದಲ್ಲಿ ಸಫಲರಾಗಲು ಸಾಧ್ಯವಾಗುತ್ತದೆ. ಅಂದ ಮೇಲೆ ನಮ್ಮ ಭವ್ಯ ಇತಿಹಾಸದ ಕುರಿತು ಹೆಮ್ಮೆಯಿಂದ ನಾವೂ ಅದರ ಅಂಶವಾಗುತ್ತೇವೆಂದು ಹೇಳಿಕೊಳ್ಳಲು ಸಾಧ್ಯವಾಗುತ್ತದೆ. ಪ್ರಾತಃಸ್ಮರಣೀಯಳಾದ ರಾಣಿ ಲಕ್ಷ್ಮೀಬಾಯಿಯ ಧೀಮಂತ ವ್ಯಕ್ತಿತ್ವಕ್ಕೆ ಒಂದು ಗೌರವಪೂರ್ವಕ ಪ್ರಣಾಮ. ●

➢ ಪುಟ 9 ರಿಂದ..... ನಿರ್ಣಯಗಳು...

ಸಿದ್ಧಪಡಿಸುತ್ತಿರುವುದು ಶ್ಲಾಘನೀಯ. ವಿದ್ಯಾರ್ಥಿಗಳಿಗೆ ಲೇಖನ, ರಸಪ್ರಶ್ನೆ ಕಾರ್ಯಕ್ರಮದ ಮೂಲಕ ತಿಳುವಳಿಕೆ ಹೆಚ್ಚಿಸುವ ಕಾರ್ಯಕ್ಕೆ ಈಗಾಗಲೇ ಚಾಲನೆ ನೀಡಿದ್ದು ಸಂತೋಷದ ವಿಷಯ. ಶಿಕ್ಷಕರನ್ನು ಹಲವಾರು ಅನ್ಯ ಕಾರ್ಯಗಳಿಗೆ ನಿಯೋಜನೆ ಮಾಡುವ ಬದಲು ಇಂತಹ ಅರ್ಥಪೂರ್ಣ ಕಾರ್ಯಕ್ಕೆ ನಿಯೋಜಿಸಿದರೆ ಉತ್ತಮ. ಶಿಕ್ಷಕರು ಕೂಡ ಪರಿಸ್ಥಿತಿಯ ಸೂಕ್ಷ್ಮತೆ ಅರಿತು ಇದು ಕೇವಲ ಸರ್ಕಾರಿ ಆದೇಶದ ಪಾಲನೆಯಷ್ಟೇ ಎಂದು ತಿಳಿಯದೇ, ಸ್ವಯಂ ಪ್ರೇರಿತರಾಗಿ ತಮ್ಮ ಹೆಚ್ಚಿನ ಕೊಡುಗೆ ನೀಡಬೇಕಿದೆ. ಪಾಲಕರ ಮೌಢ್ಯತೆ, ವಿದ್ಯಾರ್ಥಿಗಳ ಉದಾಸೀನತೆ ತೊಲಗಿಸುವ ಗುರುತರ ಜವಾಬ್ದಾರಿ ಚಿಕ್ಕ ಕೆಲಸವಲ್ಲ. ಪರಿವರ್ತನೆ ಕಾರ್ಯ ಕೂಡ ದೊಡ್ಡ ಮಟ್ಟದ ಶ್ರಮ ಬಯಸುತ್ತದೆ.

ಒಟ್ಟಿನಲ್ಲಿ ವಿಷಯ ಚಿಕ್ಕದೆನಿಸಿದರೂ ಮಹತ್ತರ ಪರಿಣಾಮ ಬೀರಬಲ್ಲ, ದೇಶದ ಋಣವನ್ನು ತೀರಿಸಬೇಕಾದರೆ ಮಾಡಬೇಕಾದ ಕರ್ತವ್ಯದ ಬಗ್ಗೆ ಅರಿವು ಮಾಡಿಸುವ ಮಹತ್ತರ ಕಾರ್ಯ. ಶಿಕ್ಷಕ ಆ ಮೂಲಕ ಸಮಾಜದ ಅಜ್ಞಾನ, ಅಂಧಕಾರ ತೊಲಗಿಸುವ ಗುರುವಾಗಬೇಕಿದೆ. ಬೆಲೆ ಕಟ್ಟಲಾಗದಂತಹ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕ ಸಮಾಜವನ್ನು ಕಟ್ಟುವ ನಿರ್ಮಾಣ ಕಾರನಾಗಬೇಕಿದೆ. ●

# ಶಿಕ್ಷಣದಲ್ಲಿ ಹೊಸ ಪ್ರಯೋಗಗಳು



'ಸರಕಾರ ಮಾಡುತ್ತದೆಂದು ಭರವಸೆಯನ್ನಿಟ್ಟುಕೊಂಡು ಕಾಯುವ ಬದಲಿಗೆ ಸಮಾಜದ ಎಲ್ಲಾ ವ್ಯಕ್ತಿಗಳು ಸಮಾಜದ ಉದ್ಧಾರಕ್ಕಾಗಿ ಬದ್ಧತೆಯಿಂದ ಕಾರ್ಯ ನಿರ್ವಹಿಸಬೇಕಿದೆ.' ರಾಜಸ್ತಾನದ ಒಂದು ಹಳ್ಳಿಯ ಪಾಠಶಾಲೆಯಲ್ಲಿ ಶಿಕ್ಷಕರ ಅಭಾವವಿದ್ದುದರಿಂದ ಆ ಹಳ್ಳಿಯ ವಿದ್ಯಾವಂತ ನಿರುದ್ಯೋಗಸ್ಥ ಹೆಣ್ಣು ಮಕ್ಕಳು ವೇತನವನ್ನೂ ಪಡೆಯದೇ ಮಕ್ಕಳಿಗೆ ಬೋಧಿಸುತ್ತಿರುವ ಉದಾಹರಣೆಯನ್ನು ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ, ದಿಲ್ಲಿಯ ಸಂಘಟನಾ ಮಂತ್ರಿಯಾಗಿರುವ ಶ್ರೀ ಮಹೇಂದ್ರ ಕಪೂರ್‌ಜೀಯವರು ಬೆಂಗಳೂರಿನ ಮೈಂಡ್ ಟ್ರೀ ಸಾಫ್ಟ್‌ವೇರ್ ಕಂಪನಿಯಲ್ಲಿ ಅನೇಕ NGO ಗಳೊಂದಿಗೆ ದಿನಾಂಕ 29.04.2019ರಂದು ನಡೆದ ಸಭೆಯಲ್ಲಿ ತಿಳಿಸಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಶ್ರೀ ಮಹೇಂದ್ರ ಕಪೂರ್‌ಜೀರವರ ಕರ್ನಾಟಕ ಭೇಟಿಯ ನಿಮಿತ್ತ ಮೈಂಡ್ ಟ್ರೀ ಸಾಫ್ಟ್‌ವೇರ್ ಕಂಪನಿಯ ಸಹಯೋಗದೊಂದಿಗೆ ಶಿಕ್ಷಣ, ಶಿಕ್ಷಕ ಹಾಗೂ ವಿದ್ಯಾರ್ಥಿಗಳ ಉನ್ನತಿಗಾಗಿ ಶ್ರಮಿಸುತ್ತಿರುವ ಉತ್ತಮ NGO ಗಳೊಂದಿಗೆ ಸಭೆಯನ್ನು ಏರ್ಪಡಿಸಿತ್ತು. ಜನನಿ ಟ್ರಸ್ಟ್‌ನ ಶ್ರೀ ದೇವರಾಜುರವರು ಇನ್ನೊಬ್ಬರನ್ನು ಪರಿವರ್ತನೆ ಮಾಡುವ ಕೆಲಸ ಮಾಡುವ ಬದಲು ಹಾಗು ಮೊದಲು ನಾವು ಬದಲಾಗಬೇಕು ಎಂದು ಹೇಳಿದರು. ತಮ್ಮ ತಂದೆ–ತಾಯಿಯ ಹೆಸರಿನಲ್ಲಿ ಪ್ರತಿಯೊಬ್ಬರು ಒಂದೊಂದು ಸಸಿಗಳನ್ನು ನೆಟ್ಟು ಅವುಗಳ ಪಾಲನೆ–ಪೋಷಣೆ ಮಾಡಬೇಕು. ಶಿಕ್ಷಕ ಮತ್ತು ಪಾಲಕರು ಕೇವಲ ಬೋಧಕರಾಗದೇ ಸಾಧಕರಾಗಬೇಕು. ಆಗಲೇ ವಿದ್ಯಾರ್ಥಿಗಳು ಅವರನ್ನು ನೋಡಿ ತಮ್ಮ ಜೀವನದಲ್ಲೇನಾದರೂ ಸಾಧಿಸುತ್ತಾರೆ ಎಂದು ತಿಳಿಸಿದರು.

ಗುಬ್ಬಚ್ಚಿ ಎಂಬ ಹೆಸರಿನ NGO, ಶಾಲಾ ಅವಧಿಯ ಮಧ್ಯದಲ್ಲಿಯೇ ಶಾಲೆಯನ್ನು ಬಿಡುವ ಮಕ್ಕಳನ್ನು ಹುಡುಕಿ ಅವರನ್ನು ವಾಪಸ್ಸು ಶಾಲೆಗೆ ಸೇರಿಸುವ ಕೆಲಸವನ್ನು ಮಾಡುತ್ತದೆ. ಶಿಕ್ಷಕರು ಶಾಲೆಯಲ್ಲಿ ಬೋಧನಾ ಕಾರ್ಯವನ್ನಲ್ಲದೇ ಅನ್ಯ ಕಾರ್ಯಗಳನ್ನು ನಿಭಾಯಿಸುತ್ತಿರುವ ಬಗ್ಗೆ ಆಶ್ಚರ್ಯವನ್ನು ವ್ಯಕ್ತಪಡಿಸಿದರಲ್ಲದೇ ಶಿಕ್ಷಕರಿಗೆ ಬೋಧನಾ ಕಾರ್ಯವನ್ನಲ್ಲದೇ ಮತ್ಯಾವ ಅನ್ಯ ಕಾರ್ಯವನ್ನು ನೀಡಬಾರದೆಂದು ಹೇಳಿದರು.

ಸುವಿದ್ಯಾ ಎಂಬ NGO ಪ್ರಾಥಮಿಕ ಶಾಲೆಯ ಮಕ್ಕಳ ಸಂಖ್ಯೆಗನುಗುಣವಾಗಿ ಮೂರು ವಿದ್ಯಾರ್ಥಿಗಳಿಗೆ ಒಂದರಂತೆ ಟ್ಯಾಬ್ ನೀಡುವ ಕಾರ್ಯವನ್ನು ಮಾಡುತ್ತಿದ್ದಾರೆ. ಟ್ಯಾಬ್‌ನಲ್ಲಿ ಶಿಕ್ಷಕರಿಗೆ ಅನುಕೂಲವಾಗುವಂತಹ ಬೋಧನಾ ವಿಧಿಗಳು, ಪಠ್ಯಕ್ರಮಕ್ಕೆ ಸಹಾಯಕವಾಗುವಂತಹ ಬೋಧನಾ ಸಲಕರಣೆಗಳು, ಮಕ್ಕಳ ಕಲಿಕಾ ಆಸಕ್ತಿಯನ್ನು ಹೆಚ್ಚಿಸುವ ಕಲಿಕಾ ಸಾಮಗ್ರಿಗಳು ಇರುವಂತೆ ನೋಡಿಕೊಂಡು ವಿದ್ಯಾರ್ಥಿಗಳ ಕಲಿಕೆಯಲ್ಲಿ ಸಹಾಯಕರಾಗುತ್ತಿರುವುದಾಗಿ ತಿಳಿಸಿದರು.

ಶಿಕ್ಷಣ ಫೌಂಡೇಶನ್ ಎಂಬ NGO ರಾಮನಗರ ಜಿಲ್ಲೆಯ ಕನಕಪುರ ತಾಲ್ಲೋಕನ್ನು ತಮ್ಮ ಕಾರ್ಯ ಕ್ಷೇತ್ರವನ್ನಾಗಿ ಆಯ್ಕೆ ಮಾಡಿಕೊಂಡು ಬಡ ಮಕ್ಕಳ ವೈದ್ಯರಾಗುವ ಕನಸನ್ನು ನನಸು ಮಾಡುವಲ್ಲಿ ಸಹಕರಿಸುತ್ತಿರುವುದಾಗಿ ತಿಳಿಸಿದರು. ಬಡ ಹಾಗೂ ಪ್ರತಿಭಾವಂತ ಮಕ್ಕಳ ಉನ್ನತ ಶಿಕ್ಷಣಕ್ಕೆ ಸಹಕರಿಸುತ್ತಿರುವುದಾಗಿ ತಿಳಿಸಿದರು.

ಮೈಂಡ್ ಟ್ರೀ ಕಂಪನಿಯವರು 'ಗ್ರೀನ್ ಸ್ಕೂಲ್' ಎಂಬ ಯೋಜನೆಯನ್ನು ಕೈಗೆತ್ತಿಕೊಂಡಿದ್ದು ಶಾಲಾ ಪರಿಸರವನ್ನು ಹಸಿರುಗೊಳಿಸುವ ಮತ್ತು ಅನಾರೋಗ್ಯ ಬಡ ಮಕ್ಕಳಿಗೆ ವೈದ್ಯಕೀಯ ಚಿಕಿತ್ಸೆ ಕೊಡಿಸುವ ಕೆಲಸ ಮಾಡುತ್ತಿದ್ದಾರೆ.

ಈ ಎಲ್ಲಾ NGO ಗಳು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಜೊತೆಗೂಡಿ ಸಮಾಜದಲ್ಲಿ ಒಳ್ಳೆಯ ಪರಿವರ್ತನೆ ತರುವ ಪ್ರಯತ್ನ ಮಾಡುವ ಆಶಯ ವ್ಯಕ್ತಪಡಿಸಿದರು.

ಅ.ಭಾ.ರಾ.ಶೈ. ಮಹಾಸಂಘದ ಮಹಾಮಂತ್ರಿಗಳಾದ ಶ್ರೀ ಶಿವಾನಂದ ಸಿಂದನಕೇರಾರವರು ಸಂಘದ ಧ್ಯೇಯ ವಾಕ್ಯವಾದ ರಾಷ್ಟ್ರ ಹಿತದಲ್ಲಿ ಶಿಕ್ಷಣ, ಶಿಕ್ಷಣದ ಹಿತದಲ್ಲಿ ಶಿಕ್ಷಕ, ಶಿಕ್ಷಕನ ಹಿತದಲ್ಲಿ ಸಮಾಜವೆಂಬುದನ್ನು ಹೇಳುತ್ತಾ ತಮ್ಮ ಪ್ರಸ್ತಾವನಾ ಭಾಷಣವನ್ನು ಮಾಡಿದರು.

ಕ.ರಾ.ಮಾ.ಶಿಕ್ಷಕ ಸಂಘದ ಕಾರ್ಯಾಧ್ಯಕ್ಷರಾದ ಶ್ರೀ ಅರುಣ್ ಶಹಾಪುರ್‌ರವರು ಶಿಕ್ಷಣ ಕ್ಷೇತ್ರದ ಪ್ರಸ್ತುತ ಸಮಸ್ಯೆಗಳು, ಅವುಗಳನ್ನು ಪರಿಹರಿಸುವಲ್ಲಿ ನಾವೆಲ್ಲರೂ ಹೇಗೆ ಒಂದಾಗಿ ಕೆಲಸ ಮಾಡಬಹುದೆಂಬುದನ್ನು ಸವಿಸ್ತಾರವಾಗಿ ತಿಳಿಸಿದರು. ಸಭೆಯಲ್ಲಿ ಉಪಸ್ಥಿತರಿದ್ದ ಕ.ರಾ.ಮಾ.ಶಿ.ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿದಾನಂದ್ ಆ.ಕೇ. ಪಾಟೀಲ್‌ರವರು ಎಲ್ಲಾ NGO ಗಳ ಪರಿಚಯವನ್ನು ಸಭೆಗೆ ಮಾಡಿಸಿದರು. ಸಹಕಾರ್ಯದರ್ಶಿಗಳಾದ ಶ್ರೀ ಗಂಗಾಧರ್‌ರವರು ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದರು. ಅ.ಭಾ.ರಾ.ಶೈ.ಮಹಾಸಂಘದ ಮಹಿಳಾ ವಿಭಾಗದ ಸಹಕಾರ್ಯದರ್ಶಿಯವರಾದ ಶ್ರೀಮತಿ ಮಮತಾ ಡಿ.ಕೆ ರವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲರಿಗೂ ವಂದನಾರ್ಪಣೆ ಮಾಡಿದರು.

MAG(3)/NPP/26/2018-19 Registered No. RNI 45459/85
Posted at Bangalore PSO Bangalore -560 026
Date of Publishing : 17-05-2019
Date of Posting 20h or 21st of every month
Posted at Periodical Rate

# ಚಿತ್ರ ಸುದ್ದಿ



ದಿನಾಂಕ 27-4-2019 ರಂದು ಹುಬ್ಬಳ್ಳಿಯಲ್ಲಿ ನಡೆದ ಸಂಘಟನಾತ್ಮಕ ವಿಚಾರ ಬೈಠಕ್



ಬೈಠಕ್‌ನಲ್ಲಿ ಎ.ಬಿ.ಆರ್.ಎಸ್.ಎಂ.ನ ಸಂಘಟನಾ ಮಂತ್ರಿಗಳಾದ ಶ್ರೀಯುತ ಮಹೇಂದ್ರ ಕಪೂರ್ ಜಿ ಅವರೊಂದಿಗೆ ಕರ್ನಾಟಕದ ತಂಡ



ಶ್ರೀಯುತ ಮಹೇಂದ್ರ ಕಪೂರ್ ಜಿ ಅವರೊಂದಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪ್ರಮುಖರು



ಉಪನ್ಯಾಸ ವೃಂದದವರೊಂದಿಗೆ ಶ್ರೀಯುತ ಮಹೇಂದ್ರ ಕಪೂರ್ ಜಿ ಅವರ ಸಮಾಲೋಚನಾ ಸಭೆ

**ಗಮನಿಸಿ**

ಶಿಕ್ಷಕ ಸಮಾಚಾರಕ್ಕೆ ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ ಪ್ರತಿ ತಿಂಗಳು 5 ನೇ ತಾರೀಖಿನೊಳಗೆ **akss1950@gmail.com** ಇ-ಮೇಲ್‌ಗೆ ಕಳುಹಿಸಿಕೊಡಿ.

**IF UNDELIVERED PLEASE RETURN TO SENDER**

Printed By :
General Secretary,
Karnataka Rajya Madhyamika Shikshaka Sangha ®.)
Published By:
General Secretary,
Karnataka Rajya Madhyamika Shikshaka Sangha (R.)
Owned By :
Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : General Secretary, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com